ಗಣೇಶ ಮಲ್ಯನ ಮೊಮ್ಮಗ ರಾಮಚಂದ್ರನು, ಭೈರಪ್ಪ ನಾಯಕ (1629 – 64)ನ ಮಂತ್ರಿಯೂ, ಆಪ್ತನೂ ಆಗಿದ್ದ. ಅವನ ಕಾರ್ಯದಕ್ಷತೆ, ಸ್ವಾಮಿನಿಷ್ಠೆಗಳಿಂದ ಪ್ರಸನ್ನನಾದ ಅರಸನು ಕೇಳಿದ್ದನ್ನು ಕೊಡುವುದಾಗಿ ಆಶ್ವಾಸನೆಯಿತ್ತನಂತೆ. ಒಂದೂವರೆ ಘಂಟೆ(ಮೂರೂ ವರೆ ಘಳಿಗೆ) ರಾಜಮುದ್ರೆ ಮತ್ತು ಅಧಿಕಾರ ತನಗೆ ಕೊಡಬೇಕು ಎಂದು ಮಲ್ಯನು ಕೇಳಿದಾಗ ದೊರೆ ಹೌಹಾರಿದರೂ, ಕೊಟ್ಟ ಮಾತು ನಡೆಸಿದ, ಈ ರಾಜಾಧಿಕಾರ ಯಾವ ರೀತಿ ಸ್ವಾರ್ಥಕ್ಕಾಗಿ ಈತ ಬಳಸಬಹುದೆಂದು ಊಹಾಪೋಹ ನಡೆದಾಗಲೇ, ದಿಗಿಲಿನಿಂದ ಶತಪಥ ಓಡುತ್ತಿದ್ದಾಗ, ಸಕಾಲದಲ್ಲಿ ಹಿಂತಿರುಗಿದ ರಾಮಚಂದ್ರ ಮಲ್ಯನಿಗೆ ಮೊಹರಿನ ಉಪಯೋಗದ ವಿಚಾರ ಕೇಳಿದಾಗ, ಕೆಲ ತಾಮ್ರ ಶಾಸನ ಗಳನ್ನು ನಗು ಮೊಗದಿಂದ ಅರಸನಿಗೆ ತೋರಿಸಿದ. ಭಾವುಕ ಪ್ರಜೆ ಗಳ ಆಸೆ ಆಕಾಂಕ್ಷೆಗಳನ್ನು ಈಡೇರಿಸುವ ಸಲುವಾಗಿ ಹೊನ್ನಾವರದಲ್ಲಿ ಒಂದು ದೇವಾಲಯ, ಮತ್ತು ಗೋಕರ್ಣದಲ್ಲಿ ಒಂದು ಅನ್ನ ಛತ್ರ ವನ್ನು ಸ್ಥಾಪಿಸುವುದಕ್ಕಾಗಿ, ಭೂ ದಾನದ ದಾಖಲೆಗಳು ಅವುಗಳಲ್ಲಿ ದ್ದವು. ಸಾರ್ವಜನಿಕರ ಹಿತಕ್ಕಾಗಿ ರಾಜಮುದ್ರೆ ಕೇಳಿದವನ ಬಗ್ಗೆ ತಾನು ಶಂಕಿಸಿದೆನಲ್ಲ ! ಎಂದು ಅರಸನಿಗೆ ಮುಜುಗರವಾಯಿತು. ಅನಂತರ ರಾಮಚಂದ್ರ ಮಲ್ಯನು ಸೂಚಿಸಿದ ಎಲ್ಲ ದಾನ – ದತ್ತಿ ಗಳಿಗೆ ಪ್ರಶ್ನಿಸದೇ ಒಪ್ಪಿಗೆ ನೀಡಲಾರಂಭಿಸಿದ. ಇಂದಿಗೂ ರಾಮಚಂದ್ರ ಮಲ್ಯನ ವಂಶಜರು ಹೊನ್ನಾವರದಲ್ಲಿ ವಾಸವಾಗಿದ್ದಾರೆ. ನಾರಾಯಣ ಮಲ್ಯನು ಕೆಳದಿಯ ವಂಶಾವಳಿ ಮುಂದುವರಿದು ಹೋಗಲು ಸಕ್ರಿಯ ಸಹಾಯ ಮಾಡಿದನು. 1664ರಲ್ಲಿ ಭೈರಪ್ಪ ನಾಯಕನ ಅಕಾಲ ಮೃತ್ಯುವಿನಿಂದಾಗಿ ಅರಮನೆಯಲ್ಲಿ ಅರಾಜಕತೆ ತಲೆದೋರಿತು. ಮಲ್ಯನು ಚೆನ್ನಮ್ಮಾಜಿ ಹಾಗೂ ಪ್ರಧಾನಿ ತಿಮ್ಮಣ್ಣರನ್ನು ಸಾಂತ್ವನ ಗೊಳಿಸಿ, ಸೋಮಶೇಖರನ ಹೆಸರಿನಲ್ಲಿ ರಾಜ್ಯಾಡಳಿತವನ್ನು ದಕ್ಷ ರೀತಿಯಿಂದ ನಡೆಸಲಾರಂಭಿಸಿದನು. ವಿಠ್ಠಲ ಮಲ್ಯನು ಗೋವಾದ ರಾಯಭಾರಿಯಾಗಿ 1671ರಲ್ಲಿ ಪೋರ್ಚುಗೀಸರೊಂದಿಗೆ ಮಾಡಿ ಕೊಂಡ ಒಪ್ಪಂದದ ಶಿಲ್ಪಿಯಾದನು.

ಪ್ರತಿಭಾವಂತರು

ಕೆಳದಿಯ ಆಳ್ವಿಕೆಯಲ್ಲಿ ಕೊಂಕಣಿಗರು ಸರ್ವತೋಮುಖ ಅಭಿ ವೃದ್ಧಿ ಮಾಡಿಕೊಳ್ಳುವುದರ ಜೊತೆಗೆ ತಮ್ಮ ಆಸಕ್ತಿ, ಅಭಿರುಚಿ, ಪ್ರತಿಭೆಗಳನ್ನು ಅರಳಿಸಿಕೊಂಡರು. ರಂಗಯ್ಯ ಅಮಲಾಡಿ, ಸಂಗೀತ ದಲ್ಲಿಯ ತನ್ನ ಪರಿಣತಿಯಿಂದಾಗಿ, ದೊರೆಗಳ ಪ್ರೀತಿಗೆ ಪಾತ್ರನಾಗಿ, ಅಮಲಾಡಿಯ ಕುರುಕ ನಾಡಿನ ಇನಾಮು ಪಡೆದಿದ್ದ. ಕೊಲ್ಲೂರ ದೇವಾಲಯದ ಸಾರಸ್ವತ ಸಂಗೀತಗಾರರಾಗಿದ್ದ ವೆಂಕಟೇಶಯ್ಯ ಮತ್ತು ಶಾಂತಯ್ಯರು, ಉಡುಕ್ಕೆ (ತಾಲವಾದ್ಯ) ಮತ್ತು ಸಾರಂಗಿ ಗಳಲ್ಲಿಯ ಪ್ರಾವೀಣ್ಯದಿಂದಾಗಿ ಭಕ್ತಾದಿಗಳ ಗೌರವಕ್ಕೆ ಪಾತ್ರ ರಾಗಿದ್ದರು. ಚಂದಾವರ (ಉತ್ತರ ಕನ್ನಡ)ದ ನಾರಾಯಣಪ್ಪ ನಾಡಕರ್ಣಿ ಅತಿ ಚತುರ ಚದುರಂಗದ ಆಟಗಾರನಾಗಿದ್ದ. ಹೀಗಾಗಿ ಯುವರಾಜ ಸೋಮಶೇಖರ ನಾಯಕನು (1663 – 69) ಅಲ್ಲಿ ಆಗಾಗ ಬೀಡು ಬಿಟ್ಟು ಈ ಆಟದಲ್ಲಿ ಮೈಮರೆಯುತ್ತಿದ್ದ. ಮುಂದೆ ಪಟ್ಟವೇರಿದಾಗ ನಾಯಕನು ನಾರಾಯಣಪ್ಪನಿಗೆ ಚಂದಾವರ ಗೇರುಸೊಪ್ಪೆಗಳ ಶಾನುಭೋಗಿಕೆಯನ್ನು ವಹಿಸಿಕೊಟ್ಟನು. ಮೆಣಸಿನ ಕಾಳಿನ ವ್ಯಾಪಾರದಲ್ಲಿ ಸೈ ಅನಿಸಿಕೊಂಡ, ಹೊನ್ನಾವರದ ಖ್ಯಾತ ವ್ಯಾಪಾರಿ ಹರಿ ಕಮ್ತಿ (ಕಾಮತ) ಮೆಣಸಿನಕಾಳನ್ನು ಬ್ರಿಟಿಷರಿಗೆ ಮಾರಲು 1740ರಲ್ಲಿ ಮಹತ್ವದ ಒಪ್ಪಂದ ಮಾಡಿಕೊಳ್ಳಲು ಕಾರಣೀಭೂತನಾಗಿದ್ದ.

ಕೊಡಗಿನಲ್ಲಿ ರಾಜ್ಯವಾಳಿದ (1600 – 1834) ಕೆಳದಿಯ ಮಾಂಡಲಿಕರು, ರಾಜ್ಯದಲ್ಲಿ ಸುವ್ಯವಸ್ಥೆ ಸ್ಥಾಪಿಸಲು ಕೊಂಕಣಿಗರನ್ನು ಬರಮಾಡಿಕೊಂಡರು. ಬೆದ್ರಾಮನ್ ನಾರಾಯಣಪ್ಪನು ಕೆಲಕಾಲ

ಕೊಡಗಿನಲ್ಲಿ ಸೇವೆ ಸಲ್ಲಿಸಿದನು. ಬೆಳ್ಮಾರೆ ಕಾಳಪ್ಪಯ್ಯನು ಅಲ್ಲಿ ಶಿರಸ್ತೇದಾರ (ಲೆಕ್ಕಪತ್ರಗಳ ಅಧಿಕಾರಿಯಾಗಿದ್ದ). ಸ್ವಾದಿ ಅಥವಾ ಸೋಂದೆ ಅರಸರು ಬಿಕ್ಕಟ್ಟಿನ ಪ್ರಸಂಗಗಳಲ್ಲಿ ಸಾರಸ್ವತರ ರಾಯ ಭಾರತ್ವವನ್ನು ಕೋರುತ್ತಿದ್ದರು. ಲಕ್ಷ್ಮೀಕಾಂತ ಶೆಣೈ ಬ್ರಿಟಿಶರೊಂದಿಗೆ ಮಾತುಕತೆ ಪ್ರಾರಂಭಿಸಿ, ಶಾಂತಿಯ ಒಡಂಬಡಿಕೆಯಾಗುವಂತೆ ಮಾಡಿದನು. ಮೈಸೂರಿನ ಹೈದರಾಲಿಗೂ ಕೊಂಕಣಿಗರ ಸಹಾಯ ಅತ್ಯವಶ್ಯವೆನಿಸಿದ್ದರಿಂದ ವಕೀಲನಾಗಿದ್ದ ಅಪ್ಪಾಜಿ ರಾವುನ ಮಧ್ಯಸ್ಥಿಕೆಯಿಂದ ಮರಾಠರೊಂದಿಗೆ (1767) ಒಪ್ಪಂದ ಮಾಡಿಕೊಂಡನು. ಈ ನೆರವಿಗಾಗಿ ದಾವಣಗೆರೆಯ ಜಹಗೀರನ್ನು ಕೊಟ್ಟಾಗ, ಅಪ್ಪಾಜಿ ರಾಮನು ಬೇರೆ ಬೇರೆ ವ್ಯಾಪಾರಿಗಳನ್ನು ಆಮಂತ್ರಿಸಿ ಅದನ್ನೊಂದು ಮಹತ್ವದ ನಗರವನ್ನಾಗಿ ಮಾಡಿದನು. ಹೈದರಾಲಿ ಬಂಕಾಪುರವನ್ನು ಗೆದ್ದು ಅದರ ಆಡಳಿತವನ್ನು ಅಪ್ಪಾಜಿ ರಾಮನಿಗೆ ವಹಿಸಿಕೊಟ್ಟಿದ್ದನು. ಇದು ಒಪ್ಪಿಗೆಯಾಗದ ಟಿಪ್ಪು ಸುಲ್ತಾನನು ತನ್ನ ಸೋದರಮಾವ ಮೀರ್‌ಸಾದಿಕನಿಗೆ ಆ ಅಧಿಕಾರವನ್ನು ಕೊಡ ಮಾಡಿದನು. ಸಾದಿಕನು ಮುಂದೆ ರಾಜದ್ರೋಹವನ್ನು ಎಸಗಿದ್ದರಿಂದ, ಟಿಪ್ಪುವಿಗೆ ರಾಜ್ಯದ ಕಾರಭಾರವನ್ನು ಸುಸೂತ್ರವಾಗಿ ನಡೆಸಲು ಕೊಂಕಣಿಗರ, ನೆರವಿನ ಆವಶ್ಯಕತೆ ಎಷ್ಟಿದೆ ಎಂದು ಅರಿಯುವಂತೆ ಆಯಿತು! ಮುಂದೆ ಬ್ರಿಟಿಶ್ ಗವರ್ನರನೊಡನೆ ವಿಚಾರ ವಿಮರ್ಶೆ ಮಾಡಲು ಅಪ್ಪಾಜಿ ರಾಮನನ್ನೇ ಕಳುಹಿಸಿ ಶಾಂತಿ ಒಪ್ಪಂದವನ್ನು (1784) ಮಾಡಿಕೊಳ್ಳಬೇಕಾಯಿತು.

ಬ್ರಿಟಿಶರ ಆಳ್ವಿಕೆಯಲ್ಲಿ ಕೊಂಕಣಿ – ಕನ್ನಡಿಗರ ಬಾಂಧವ್ಯದ ಹೊಸ ಯುಗ ಪ್ರಾರಂಭವಾಯಿತು.ಸಾರಸ್ವತರು ಶಾನಭೋಗ, ಶಿರಸ್ತೇದಾರರ ಕೆಲಸಗಳನ್ನು ದಕ್ಷ ರೀತಿಯಿಂದ ನಿರ್ವಹಿಸಿಕೊಂಡು ಪ್ರಜೆಗಳಿಂದಲೂ ಬೆನ್ನು ಚಪ್ಪರಿಸಿಕೊಂಡರು. ಕನ್ನಡ ಜಿಲ್ಲೆಯ ಪ್ರಥಮ ಜಿಲ್ಲಾಧಿಕಾರಿಯಾಗಿದ್ದ ಸರ್ ಥಾಮಸ್ ಮನ್ರೋ, (1800) "ಈ ಸಾರಸ್ವತರ ಲೆಕ್ಕಾಚಾರದ ಪರಿಣತಿಯಿಂದಾಗಿ ನಾನೂರು ವರ್ಷದ ಹಿಂದಿನ ಭೂಕಂದಾಯದ ವಿಲೇವಾರಿ ವಿವರಗಳು ಕ್ಷಣಾರ್ಧದಲ್ಲಿ ಸಿಗುವಂತಾಗಿವೆ." ಎಂದು ಮನಸ್ವೀ ಹೊಗಳಿದ್ದ. ಅಮ್ಮೆಂಬಳ ಸುಬ್ಬರಾವ್ ಪೈಗಳಂತಹ ಮುಖಂಡರು ಸೇರಿ ಮಂಗಳೂರ ನಗರದಲ್ಲಿ ಕೆನರಾ ಹಾಯಸ್ಕೂಲ್ ಸ್ಥಾಪಿಸಿದರು. (1891). ಮದ್ರಾಸ್ ವಿಶ್ವವಿದ್ಯಾಲಯ, ಈ ಶಾಲೆಗೆ ಮಾನ್ಯತೆ ಕೊಟ್ಟ ವರ್ಷವೇ ಮೆಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ಮೂರು ಸ್ಥಾನಗಳನ್ನು ಕೊಂಕಣಿಗರು ಆಕ್ರಮಿಸಿ ಚಮತ್ಕಾರವನ್ನು ನಿರ್ಮಿಸಿದರು! ಈ ಯಶಸ್ಸಿನ ಹಿಂದೆ, ಪದ್ಮನಾಭ ಬಾಳಿಗರಂತಹ, ತಮ್ಮ ಜೀವನವನ್ನೇ ಶಿಕ್ಷಣಕ್ಕೆ ಮುಡಿಪು ಇಟ್ಟಂತಹ ಶಿಕ್ಷಕ ವೃಂದ ಇದ್ದುದರಿಂದ ಇದು ಸಾಧ್ಯವಾವಾಯಿತು. ಬೆನಗಲ್ ರಾಮರಾವ್, ನರಸಿಂಗರಾವ್‌ರಂತಹ ಅನೇಕಾನೇಕ ಕನ್ನಡಿಗರು ಈ ಶಾಲೆಯ ಗರಡಿಯಲ್ಲಿ ತರಬೇತಿ ಹೊಂದಿ ರಾಷ್ಟ್ರಮಟ್ಟದ ಸೇವೆಯಲ್ಲಿ ತೊಡಗುವಂತೆ ಆಯಿತು.

ಮುಂದೆ ಸುಬ್ಬರಾವ್ ಪೈಗಳು ಹಣಕಾಸಿನ ಸಂಸ್ಥೆಯೊಂದನ್ನು ಮಂಗಳೂರಿನಲ್ಲಿ ಸ್ಥಾಪಿಸಿ, ಖ್ಯಾತವಾದ ಕೆನರಾ ಬ್ಯಾಂಕಿಗೆ ಅಡಿಗಲ್ಲು ಹಾಕಿದರು. ಕಾರ್ಪೋರೇಶನ್ ಬ್ಯಾಂಕ್, ಶಾಮರಾವ್ ವಿಠ್ಠಲ ಸಹಕಾರಿ ಬ್ಯಾಂಕ್ ಸ್ಥಾಪಿಸಿದವರೂ ಕೊಂಕಣಿಗರೇ. ತೋನ್ಸೆ ಮಾಧವ ಪೈಗಳಂತೂ ಮಣಿಪಾಲ, ಉಡುಪಿಗಳಲ್ಲಿ ಆರ್ಥಿಕ ಕ್ರಾಂತಿಯನ್ನೇ ಎಸಗಿದರು. ಸಿಂಡಿಕೇಟ್ ಬ್ಯಾಂಕ್ ಸ್ಥಾಪನೆ ಜೊತೆಗೆ ವೈಜ್ಞಾನಿಕ, ತಾಂತ್ರಿಕ, ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿದರು. ಮಣಿಪಾಲದಲ್ಲಿ ಕಸ್ತೂರ್‌ಬಾ ಮೆಡಿಕಲ್ ಕಾಲೇಜು ಸ್ಥಾಪಿಸಿ, ಶಿಕ್ಷಣದ ವೆಚ್ಚವನ್ನು ವಿದ್ಯಾರ್ಥಿಗಳಿಂದಲೇ ಭರಿಸುವ ಕ್ರಮವನ್ನು ತಮ್ಮದನ್ನಾಗಿ ಮಾಡಿಕೊಂಡು, ಇನ್ನಿತರರಿಗೂ ಈ ದಿಸೆಯಲ್ಲಿ ದಾರಿದೀಪವಾದರು. ನಿಸ್ವಾರ್ಥವಾಗಿ ದುಡಿದರೆ, ಬೋಳಾದ ಗುಡ್ಡವನ್ನೂ ನಂದನವನವನ್ನಾಗಿ ಮಾರ್ಪಡಿಸಬಹುದು ಎಂದು ಪರೀಕ್ಷಿಸಿ ನೋಡಲು ಮಣಿಪಾಲಿಗೆ ಹೋಗಬೇಕು.

ದೇಶ ಸೇವೆಯಲ್ಲಿ

ಮಹಾತ್ಮಾಗಾಂಧಿಯವರ ಸ್ವಾತಂತ್ರ್ಯ ಕಹಳೆಗೆ ಓಗೊಟ್ಟು ಕೊಂಕಣಿಗರು, ಸಾಂಸಾರಿಕ ಸುಖ – ಸಂಪತ್ತಿಗೆ ಲೆಕ್ಕಿಸದೇ ಭಾರತ ಮಾತೆಯಂತೆ ಕರ್ನಾಟಕ ಮಾತೆಯನ್ನೂ ಸಂಕೋಲೆಯಿಂದ ಬಿಡುಗಡೆ ಮಾಡುವ ಪಣ ತೊಟ್ಟರು. ಕಾರ್ನಾಡ ಸದಾಶಿವ ರಾಯರಂಥ ಮಹಾತ್ಯಾಗಿಗಳ ಜೀವನ ಹಲವರಿಗೆ ಗೊತ್ತಿಲ್ಲ. ಮಹಿಳೆಯರೂ ಜನಜಾಗೃತಿಯ ವಿಷಯದಲ್ಲಿ ಹಿಂದೆ ಬೀಳಲಿಲ್ಲ. ಕೃಷ್ಣಾಬಾಯಿ ಪಣಜೀಕರ, ಉಮಾಬಾಯಿ ಕುಂದಾಪುರ, ಕಮಲಾದೇವಿ ಧಾರೇಶ್ವರ (ಚಟ್ಟೋಪಾಧ್ಯಾಯ)ರು ಚಿರಸ್ಮರಣೀಯರು. ಪಂಜೆ ಮಂಗೇಶ ರಾಯರು, ಗೋವಿಂದ ಪೈಗಳು, ಬೆನಗಲ್ ರಾಮರಾಯರು, ದಿನಕರ ದೇಸಾಯಿ, ಗೌರೀಶ ಕಾಯ್ಕಿಣಿ, ಯಶವಂತ ಚಿತ್ತಾಲರು, ಕನ್ನಡ ಸಾಹಿತ್ಯವನ್ನು ಶ್ರೀಮಂತವಾಗಿಸಿದರೆ, ಡಾ. ಭಾಸ್ಕರ ಆನಂದ ಸಾಲೆತೊರೆ, ಡಾ। ಜಾರ್ಜ್ ಮೊರ್ರ್ಯಾಸ್‌ರು ಚರಿತ್ರೆಯ ಸಂಶೋಧನೆಯಲ್ಲಿ ದೊಡ್ಡ ಹೆಸರುಗಳು. ಯು. ಎಸ್. ಕೃಷ್ಣರಾವ್ ದಂಪತಿ, ಮಾಯಾ ರಾವ್ ನೃತ್ಯ ಕ್ಷೇತ್ರದಲ್ಲಿ, ಗಿರೀಶ್ ಕಾರ್ನಾಡ್ ಗುರುದತ್ ಮತ್ತು ಶ್ಯಾಮ್ ಬೆನಗಲ್‌ರು, ನಾಟಕ ಮತ್ತು ಚಲಚಿತ್ರಗಳಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದವರು. ಎಮ್. ವಿ. ಕಾಮತರು ಅಂತಾರಾಷ್ಟ್ರೀಯ ಖ್ಯಾತಿಯ ಪತ್ರಿಕಾಕಾರರಾಗಿದ್ದರೆ, ಕುಮಟೆಯ "ಕಾನಡಾ ವೃತ್ತ" ವಜ್ರಮಹೋತ್ಸವ ಆಚರಿಸಿ ಕೊಂಕಣಿಗರ ಸಾಹಸಕ್ಕೆ ಹೊಸ ಆಯಾಮ ಒದಗಿಸಿದೆ. ದಿನಕರ ಕಾಯ್ಕಿಣಿ, ದೇವೇಂದ್ರ ಮುರ್ಡೇಶ್ವರ, ಲಲಿತಾ ರಾವ್ ಸಂಗೀತದಲ್ಲಿ ದೊಡ್ಡ ಹೆಸರುಗಳು. ಇವರಲ್ಲದೇ ಉದ್ದಿಮೆ, ಕೃಷಿ, ಬ್ಯಾಂಕಿಂಗ್, ಸಂಶೋಧನೆಗಳಲ್ಲಿ ಸಹಸ್ರಾರು ಕೊಂಕಣಿಗರನ್ನು ಕರ್ನಾಟಕದ ಹಿರಿಮೆಯನ್ನು ಬೆಳೆಸಿದವರಲ್ಲಿ ಹೆಸರಿಸಬಹುದು.

ಕೊಂಕಣಿ, ಮರಾಠಿಯ ಉಪ ಭಾಷೆಯೆಂದು ಮರಾಠೀವಾದಿಗಳು ವಾದಿಸಿದರೂ. ಆ ಭಾಷೆಯಿಂದಲೇ ಮರಾಠಿ ಹುಟ್ಟಿಕೊಂಡಿರುವ ಸಾಧ್ಯತೆ ಹೆಚ್ಚು! ಜ್ಞಾನೇಶ್ವರಿಯ ಕೊಂಕಣಿಯ ಸ್ಥೂಲ ರೂಪವನ್ನು ಅರ್ಥೈಸುವಾಗ. ಅದು 'ಹಳೇ ಮರಾಠಿ' ಎಂದು ವಾದಿಸಿ ಪಾರಾಗಲು ಮಹಾರಾಷ್ಟ್ರ ವಾದಿಗಳು, ಯತ್ನಿಸುತ್ತಾರೆ. ಗೋವಾದಲ್ಲಿ ನೆಲೆಸಿದ ಕೊಂಕಣಿಗರು ತಮ್ಮ ಭಾಷೆಯಲ್ಲಿ ಸಾಕಷ್ಟು ಕೃತಿಗಳನ್ನು ರಚಿಸಿ, ಸಾಹಿತ್ಯದ ಬೆಳವಣಿಗೆಯಲ್ಲಿ ತೊಡಗಿದ್ದರು. ಬರವಣಿಗೆ ಮತ್ತು ವಾಚನದಲ್ಲಿ ಏಕರೂಪತೆ ತರಲು ವ್ಯಾಕರಣವನ್ನೂ ರಚಿಸಲಾಯಿತು. ಆದರೆ ದುರದೃಷ್ಟದಿಂದ ಮತಾಂಧನಾದ ಬಿಷಪ್ ಒಬ್ಬನು 1548ರಲ್ಲಿ ಲಭ್ಯವಿದ್ದ ಸಕಲ ಕೊಂಕಣಿ ಗ್ರಂಥಗಳನ್ನೂ ಸುಟ್ಟು ಬೂದಿ ಮಾಡಿ ಬಿಟ್ಟನು. ಕಾಲಕಾಲಕ್ಕೆ ಬೆಳಕಿಗೆ ಬಂದ ಹಲವಾರು ಕೊಂಕಣಿ ಕೃತಿಗಳನ್ನು ನಾಶ ಮಾಡಿದ್ದರಿಂದ. ಕೊಂಕಣಿ, ಕೇವಲ ಮನೆ ಮಾತಿನ ರೂಪದಲ್ಲಿ ಉಸಿರು ಹಿಡಿದಿರಬೇಕಾಗಿ ಬಂದಿತು. ಕನ್ನಡ ನಾಡಿಗೆ ವಲಸೆ ಬಂದವರು. ಹೊಸ ಭಾಷೆ ಕಲಿತು ಅದರ ಲಾಭ ಪಡೆಯುವದರಲ್ಲಿ ಆಸಕ್ತರಾಗಿದ್ದರಿಂದ, ಕೊಂಕಣಿ ಸಾಹಿತ್ಯ ಮೂಲೆಗುಂಪಾಯಿತು. ವ್ಯಾಪಾರಿಗಳು ಲೆಕ್ಕಪತ್ರಗಳನ್ನು ಕೊಂಕಣಿ ಭಾಷೆಯಲ್ಲಿ ಆದರೆ ಕನ್ನಡ ಲಿಪಿಯಲ್ಲಿ ಬರೆಯುವ ಹೊಸ ಪದ್ಧತಿಯನ್ನು ಜಾರಿಗೆ ತಂದರು! ಅನೇಕಾನೇಕ ಕನ್ನಡ ಶಬ್ದಗಳು

ಕೊಂಕಣಿಯಲ್ಲಿ ಬಳಕೆಯಲ್ಲಿದ್ದರೂ ಕನ್ನಡದಲ್ಲಿ ಉಳಿದುಕೊಂಡಿಲ್ಲ! ಸಾಗರ, ಶಿವಮೊಗ್ಗ, ಶೃಂಗೇರಿ ಪ್ರದೇಶದಲ್ಲಿ ಕನ್ನಡದ ಪ್ರಭಾವ ಹೆಚ್ಚಾಗಿ ಕಂಡು ಬರುತ್ತದೆ. ಅಲ್ಲಿಯ ಕೊಂಕಣಿ ಜನ ತಮ್ಮಲ್ಲಿ ಗಹನವಾದ ವಿಷಯದ ಕುರಿತು ಚರ್ಚಿಸುವಾಗ, ಕನ್ನಡ ಭಾಷೆಯನ್ನು ಬಳಸುವುದು ವೈಶಿಷ್ಟ್ಯ! ಅಂಕೋಲಾ – ಕಾರವಾರಗಳಲ್ಲಿ ಕನ್ನಡದಲ್ಲಿ ಕೊಂಕಣಿ ಶಬ್ದಗಳನ್ನು ಸೇರಿಸಿ ಮಾತನಾಡುವುದು ಇನ್ನೂ ಮೋಜಿನ ವಿಷಯ. ಕೆಲ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನು . ಕೊಂಕಣಿಯಲ್ಲಿ ಕಲಿಸಲಾಗುತ್ತಿದೆ! ಯಶವಂತ ಚಿತ್ತಾಲರು ಜಿಲ್ಲೆಯ ಕನ್ನಡದ ಬಳಕೆಯಲ್ಲಿದ್ದ ಕೊಂಕಣಿ ಶಬ್ದಗಳನ್ನೇ ಬಳಸಿ ಈ ಭಾಷೆಯ ಪ್ರಕಾರವನ್ನು ಸಜೀವವಾಗಿಟ್ಟಿದ್ದಾರೆ.

ಕೇರಳ, ಕರ್ನಾಟಕ, ಗೋವಾಗಳಲ್ಲಿ ಹರಡಿಕೊಂಡಿದ್ದ ಕೊಂಕಣಿಗರಿಗೆ ತಮ್ಮ ಸಾಹಿತ್ಯವನ್ನು ಅಲಕ್ಷಿಸುತ್ತಿದ್ದೇವೆಂಬ ಅರಿವು ಮೂಡುತ್ತಿದೆ. ಶತಕಗಳಲ್ಲಿ ಇನ್ನಿತರ ಪ್ರಾದೇಶಿಕ ಭಾಷೆಗಳ ವರ್ಚಸ್ಸಿಗೆ ಒಳಗಾದ ಕೊಂಕಣಿ ಭಾಷೆ, ಒಂದು ಪ್ರದೇಶದವರು, ಇನ್ನೊಂದು ಪ್ರದೇಶದವರ ಆಡು ಮಾತು ಅರ್ಥಮಾಡಿಕೊಳ್ಳದಷ್ಟು ಭಿನ್ನವಾಗಿದೆ. ಗೋವಾದಲ್ಲಿ ಪೋರ್ಚುಗೀಸ್ ಶಬ್ದಗಳು ಸೇರಿಕೊಂಡರೆ, ಕಾರವಾರ ಭಾಷೆಯಲ್ಲಿ ಮರಾಠಿ, ದಕ್ಷಿಣ ಕನ್ನಡದ ಭಾಷೆಯಲ್ಲಿ ಕನ್ನಡ ಶಬ್ದಗಳು, ಕೋಚೀನ ಕೊಂಕಣಿಯಲ್ಲಿ ಮಲಯಾಳೀ ಶಬ್ದಗಳು ಸೇರಿಕೊಂಡಿವೆ. ಗೋವಾದ ಕ್ರೈಸ್ತರು ರೋಮನ್ ಲಿಪಿ ಬಳಸಿದರೆ, ಹಿಂದುಗಳು ದೇವನಾಗರಿ ಬಳಸುತ್ತಾರೆ. ಕನ್ನಡನಾಡಿನವರು ಕನ್ನಡ ಲಿಪಿಯಲ್ಲಿ ಬರೆಯುತ್ತಾರೆ. ಕೊಂಕಣಿ ಸಾಹಿತ್ಯ ಹಸನಾಗಿ ಹೊರಹೊಮ್ಮಲು ಇದು ದೊಡ್ಡ ಕೊರತೆಯಾಗಿ ಪರಿಣಮಿಸಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯವರು ಕೊಂಕಣಿ, ಒಂದು ಸ್ವತಂತ್ರ ಭಾಷೆ ಎಂದು ಸಾರಿದರೂ, ಆತ್ಮೀಯ ಬಂಧುಗಳಾದ ಕನ್ನಡಿಗರು ಕೊಂಕಣಿ ಸಾಹಿತ್ಯ ಕೃತಿಗಳಿಗೆ ಪಾರಿತೋಷಕ ಕೊಡಲಾಗುವುದಿಲ್ಲವೆಂದು ಘಂಟಾಘೋಷವಾಗಿ ಸಾರುವ ಕೃಪೆ ಮಾಡಿದ್ದಾರೆ! ಅವರ ಅಭಿಪ್ರಾಯದಲ್ಲಿ ತುಳು ಭಾಷೆ ಮಾತ್ರ ಸಾಹಿತ್ಯ ಕೃಷಿ ಮಾಡಲು ಪರಿಪಕ್ವವಾದುದ್ದು! ●

ಕೊಂಕಣಿಯು ಸ್ವತಂತ್ರ ಭಾಷೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ 1975ರಲ್ಲಿ ಮಾನ್ಯತೆ ಕೊಟ್ಟಿತು. 1977ರಿಂದ ಕೊಂಕಣಿಯ ಸಾಹಿತ್ಯ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಗೌರವ ಪ್ರಾಪ್ತವಾಗಲು ಆರಂಭವಾಯಿತು.

ಕನ್ನಡ - ಕೊಂಕಣಿ ಭಾಷಾಬಾಂಧವ್ಯ

● ಸಂತೋಷಕುಮಾರ ಗುಲ್ವಾಡಿ

ಸಂಪಾದಕ, 'ತರಂಗ', ಮಣಿಪಾಲ – 576119, ದ.ಕ.

ಇತಿಹಾಸದುದ್ದಕ್ಕೂ ಯಾವ ರಾಜಾಶ್ರಯ ಇಲ್ಲದೆ ಅನಾಥವಾಗಿ, ಇತರ ನೆರೆ ಭಾಷಿಕರ ಆಶ್ರಯದಲ್ಲಿ ಪ್ರಹಾರಗಳನ್ನೇ ತಿಂದು, ಹರಿದು ಹಂಚಿ ಚೆಲ್ಲಾಪಿಲ್ಲಿಯಾದರೂ, ಬರ್ಬರ ಹಿಂಸಾಕಾಂಡಕ್ಕೆ ಬಲಿಯಾಗಿ ನಾಲಿಗೆ ಸೀಳಿದರೂ ಇನ್ನೂ ಜೀವಂತವಾಗಿ ಉಳಿದು, ಕೆಲವೊಮ್ಮೆ ವಾದ ವಿವಾದಗಳಿಗೆ ಮತ್ತು ತಪ್ಪು ಕಲ್ಪನೆಗಳಿಗೆ ಎರವಾಗಿ, ಕೊನೆಗೂ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಅಧಿಕೃತ ಭಾಷೆಯೆಂದು ಕೊಂಕಣಿ ಭಾಷೆ ಗೌರವ ಪಡೆದರೂ ಈಗ ಕೂಡ ಕೊಂಕಣಿಗರನ್ನೂ ಕೂಡಿ ಹಲವರಿಗೆ ಈ ಭಾಷೆಯ ಸ್ಪಷ್ಟ ಹಿನ್ನೆಲೆ ಏನೆಂದು ತಿಳಿದಿಲ್ಲ.

ಕೊಂಕಣಿ ಕೇವಲ ಭೌಗೋಲಿಕ ಅಸ್ತಿತ್ವ ಮಾತ್ರ ಅಲ್ಲ. ಅದೊಂದು ಸಾಂಸ್ಕೃತಿಕ ಪರಂಪರೆ. ಕೊಂಕಣಿ ಸತ್ವಯುತವಾದ ಸ್ವತಂತ್ರ ಭಾಷೆ. ಅದನ್ನು ಮಾತನಾಡುವವರೆಲ್ಲ ಕೊಂಕಣಿಗರು. ಕನ್ನಡ ಭಾಷೆಗೆ ಸಂಬಂಧಪಟ್ಟಂತೆ ಈ ಲೇಖನ ಇರುವುದರಿಂದ ಇಲ್ಲಿ ಪ್ರಸ್ತಾಪಿಸಿರುವ ಕೊಂಕಣಿ ಕೇವಲ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗಷ್ಟೇ ಸೀಮಿತವಾಗುವುದು ಅನಿವಾರ್ಯವಾಯಿತು. ಕನ್ನಡ ಮತ್ತು ಕೊಂಕಣಿ ಪ್ರದೇಶಗಳು, ಜನರು ಹಾಗೂ ಈ ಎರಡೂ ಭಾಷೆಗಳು ಅನೇಕ ಶತಮಾನಗಳಿಂದ ಅನ್ಯೋನ್ಯವಾಗಿ ಸಂಬಂಧ ಬೆಳೆಸಿ, ಹಾಲು–ಸಕ್ಕರೆಯಂತೆ ಸಮನ್ವಯಗೊಂಡು, ಕೂಡಿ, ಆಡಿ, ಬಾಳಿ ಬೆಳೆದುಬಂದಿದೆ.

ಕೊಂಕಣಿ ಶಬ್ದಕ್ಕೆ ಏನು ಅರ್ಥ? ಅದರ ವ್ಯುತ್ಪತ್ತಿ ಹೇಗೆ? ಎಲ್ಲ ಸಂಶೋಧಕರಲ್ಲಿರುವಂತೆ ಇಲ್ಲಿಯೂ ಭಿನ್ನಾಭಿಪ್ರಾಯಗಳಿವೆ.

1. ಸಂಸ್ಕೃತದ "ಕುಃ" = ಭೂಮಿ, "ಕೋಣಃ" = ಕೊನೆ, ಕೂಡಿ ಕೊಂಕಣವಾಯಿತು.

2. ಪರಶುರಾಮನ ತಾಯಿ ಕುಂಕಣಾ. ಆಕೆಯ ಹೆಸರಿನ ದೇವಾಲಯಗಳು ಈ ಪರಶುರಾಮ ಸೃಷ್ಟಿಯಲ್ಲಿವೆ. ಕಾಮಾಕ್ಷಿ ಎಂಬುದು ಆಕೆಯ ಇನ್ನೊಂದು ಹೆಸರು.

3. ಈ ಪ್ರದೇಶದ ಮೂಲ ನಿವಾಸಿಗಳಾದ "ಕೋಳಿ" ಬೆಸ್ತರ ಕಣಿವೆ ಕೊಂಕಣವಾಯಿತು.

ಇಂಥ ಕೋಳಿಗರ ಒಂದು ಕಣ "ಕೊಳಕಣ" ಛೋಟಾ ನಾಗಪುರದ ಬಳಿ ಇದೆ.

ಕೊಂಕಣ ಬಹು ಪ್ರಾಚೀನ ಶಬ್ದ. ಸಹ್ಯಾದ್ರಿ ಖಂಡದಲ್ಲಿ ಅದರ ವರ್ಣನೆ ಬರುತ್ತದೆ:

> "ಕೇರಳಾಶ್ಚ ತುಲಂಗಾಶ್ಚ ತಥಾ ಸೌರಾಷ್ಟ್ರವಾಸಿನಃ ।
> ಕೊಂಕಣಃ ಕರಹಾಟಾಶ್ಚ ಕರಾನಾಟಾಶ್ಚ ಬರ್ಬರಾಃ ॥

ಚೀನೀ ಪ್ರವಾಸಿ ಹುಯೇನ್‌ತ್ಸಾಂಗ್ ಉಲ್ಲೇಖಿಸಿದ ಕೊಂಕಣದ ಪ್ರದೇಶಗಳಲ್ಲಿ ಬನವಾಸಿ, ಬೆಳಗಾವಿ, ಧಾರವಾಡ ಸೇರಿದ್ದವು. ವರಾಹಮಿಹಿರನ "ಬೃಹತ್ ಸಂಹಿತೆ", ಕಲ್ಹಣನ "ರಾಜತರಂಗಿಣಿ" ಗ್ರಂಥಗಳಲ್ಲಿ, ಚಾಲುಕ್ಯರ ಶಿಲಾಲೇಖಗಳಲ್ಲಿ, ಪೆರಿಪ್ಲಸ್, ಪ್ಟಾಲೆಮಿ, ಸ್ಟ್ರೆಬೊ, ಅಲ್‌ಬರೂನಿ ಮೊದಲಾದವರೆಲ್ಲರ ಉಲ್ಲೇಖಗಳಲ್ಲಿ ಕೊಂಕಣದ ಪ್ರಸ್ತಾಪ ಬಂದಿದೆ.

ಸೂರ್ಪರಕ ಅಂದರೆ ಗರಗಸೆಯಾಕಾರದ ಕೊಂಕಣ ಪ್ರದೇಶ ಎಷ್ಟು ವಿಸ್ತಾರವಾಗಿತ್ತು? ತಪತಿ ಅಥವಾ ನರ್ಮದಾ ನದಿಯಿಂದ ಕನ್ಯಾಕುಮಾರಿಯ ವರೆಗಿನ ಪರಶುರಾಮ ಸೃಷ್ಟಿಯೇ ಈ ಪ್ರದೇಶವನ್ನು ಪವರಿದ್ದಾರೆ. ಅದು 100 ಯೋಜನ (800 ಮೈಲಿ) ಉದ್ದ ಮತ್ತು ಮೂರು ಯೋಜನ (24 ಮೈಲಿ) ಅಗಲ. ಮುಂಬಯಿಯ ಉತ್ತರಕ್ಕಿರುವ ಠಾಣೆ, ದಕ್ಷಿಣಕ್ಕಿರುವ ಕುಲಾಬಾ, ರತ್ನಗಿರಿ ಮತ್ತು ಗೋಮಂತ – ಈ ನಾಲ್ಕು ಜಿಲ್ಲೆಗಳೇ ಅಚ್ಚ ಕೊಂಕಣ ಪ್ರದೇಶಗಳು. ಉತ್ತರಕ್ಕೆ ವೈತರಣಿ ಅಥವಾ ದಂತುರಾ ಮತ್ತು ದಕ್ಷಿಣಕ್ಕೆ ಅಲಿಗಾ ಅಥವಾ ಕಾಳಿ ನದಿಯೇ ಗಡಿಗಳು.

ಇತಿಹಾಸದಲ್ಲಿ ಕೊಂಕಣ ಎಂದೂ ಸ್ವತಂತ್ರ ರಾಜ್ಯವಾಗಿರಲಿಲ್ಲ. ಕ್ರಿಸ್ತಪೂರ್ವ ಕಾಲದಿಂದ ಮೌರ್ಯರ ಆಡಳಿತದಲ್ಲಿದ್ದ ಕೊಂಕಣ ಏಳನೆಯ ಶತಮಾನದಲ್ಲಿ ಚಾಲುಕ್ಯ ಪುಲಕೇಶಿಯ ವಶಕ್ಕೆ ಬಂತು. ಅಲ್ಲಿಂದ ದೇವಗಿರಿ ಪತನದ ವರೆಗೆ 1347ರ ತನಕ, ನಡುವೆ ಸುಮಾರು 450 ವರ್ಷ ಬಿಟ್ಟರೆ ಕೊಂಕಣವನ್ನು ಕನ್ನಡದ ಕದಂಬ, ರಾಷ್ಟ್ರಕೂಟ, ಯಾದವ ಅರಸರೇ ಆಳಿದರು. ಅನಂತರ ಅದನ್ನು ಮುಸಲ್ಮಾನರು ಗೆದ್ದುಕೊಂಡರು. ವಿಜಯನಗರ ಸಾಮ್ರಾಜ್ಯ ಒಡೆದು ಐದು ಹೋಳಾಗಿ ಗೋಮಂತಕ ಅಥವಾ ಗೋವೆ, ಆದಿಲ್‌ಷಾನ ವಶಕ್ಕೆ ಹೋಯಿತು. ಆತನಿಂದ ಪೋರ್ಚುಗೀಸ್ ಅಲ್ಫೊನ್ಸೋ ಆಲ್ಬುಕರ್ಕ್ ಎಂಬವನು ಗೋವೆಯನ್ನು 1510ರಲ್ಲಿ ಕಸಿದುಕೊಂಡು ಅದು ಅವರ ವಸಾಹತು ಆಯಿತು. ಶತಮಾನಗಳಿಂದ ಕರಾವಳಿಯ ಕೋಮಲ ಹೃದಯದ ಕೊಂಕಣ ಮಂದಿ ನಿರ್ಮಿಸಿದ ವಿಶಿಷ್ಟ ಸಂಸ್ಕೃತಿಯ ಸರ್ವನಾಶ ಮಾಡಿದ ಪೋರ್ಚುಗೀಸರು ಅಲ್ಲಿಯ ದೇವಸ್ಥಾನಗಳನ್ನು ಕೆಡವಿ ಚರ್ಚುಗಳನ್ನು ಕಟ್ಟಿದರು. ಭಯಂಕರ ಬಲಾತ್ಕಾರದ ಮತಾಂತರವಾಯಿತು. ಲಿಖಿತ ಕೊಂಕಣಿ ಸಾಹಿತ್ಯವೆಲ್ಲ ಸಂಪೂರ್ಣ ಲಯಗೊಳಿಸಲ್ಪಟ್ಟಿತು. ಒಂದು ಭಾಷಾ ಸಾಹಿತ್ಯದ ಮೇಲೆ ಇಂಥ ಬರ್ಬರ ದೌರ್ಜನ್ಯ ನಡೆದುದು ಭಾರತೀಯ ಇತಿಹಾಸದಲ್ಲಿ ಇದೊಂದೇ ಉದಾಹರಣೆ. ಈ ಹಿಂಸಾಕಾಂಡದಿಂದಾಗಿ ಕೊಂಕಣಿ ಜನರು ಹೆದರಿ ನೆರೆಯ ಕರ್ನಾಟಕ, ಕೇರಳ, ಮಹಾರಾಷ್ಟ್ರಗಳಿಗೆ ಓಡಿ ಚದರಿದರು. ಚೆಲ್ಲಾಪಿಲ್ಲಿಯಾಗಿ ಹರಿದು ಹಂಚಿಹೋದರು. ಇದಿಷ್ಟು ಕೊಂಕಣ ಮತ್ತು ಮೂಲ ಕೊಂಕಣಿಯ ದುರಂತ; ರಾಜಕೀಯ ಮತ್ತು ಭೌಗೋಲಿಕ ಇತಿಹಾಸ.

ಕಾನಾರಿ/ಕೆನರಿನಾ

ತಮಾಷೆಯೆಂದರೆ ಗೋಮಂತಕಕ್ಕೆ ಬಂದ ಪೋರ್ಚುಗೀಸರು ಅಲ್ಲಿಯ ಕೊಂಕಣಿಯನ್ನು ಕನ್ನಡ (ಕಾನಾರಿ/ಕೆನರಿನಾ) ಎಂದೇ ತಪ್ಪು ತಿಳಿದುಕೊಂಡು ಅದನ್ನು "ಲಿಂಗುವಾ ಕೆನರೀನಾ ದೋನೂರ್ತೆ" – ಉತ್ತರದ ಕನ್ನಡ ಎಂದೇ ಬರೆದುಬಿಟ್ಟರು. ವಾಸ್ತವಿಕವಾಗಿ ಆಗ

ಗೋಮಂತಕ ಪ್ರದೇಶದಲ್ಲಿ ಸ್ವತಂತ್ರವಾದ ಬ್ರಾಹ್ಮಣ ಭಾಷೆಯೊಂದು ಇತ್ತು. ಅದನ್ನು ಗೋವೆಯ ಹೊರಗಿನವರು ಕೊಂಕಣಿಯೆಂದೇ ಕರೆಯುತ್ತಿದ್ದರು. ಆ ಕಾಲದಲ್ಲಿ, ಕನ್ನಡಕ್ಕೂ ತೆಲುಗಿಗೂ ತೆಲುಗು ಲಿಪಿಯೇ ಬಳಕೆಯಲ್ಲಿತ್ತು. ಕೊಂಕಣಿ ಭಾಷಾ ಶಾಸ್ತ್ರಜ್ಞರ ಅಭಿಮತದಂತೆ ಕನ್ನಡ ಮತ್ತು ಕೊಂಕಣಿ ಭಾಷೆಗಳ ಪರಸ್ಪರ ಕೊಡುಕೊಳ್ಳುವಿಕೆ ಆಗಲೇ ಆರಂಭವಾಗಿ ಸುಮಾರು 900 ವರ್ಷಗಳಾದರೂ ಆಗಿರಬಹುದು.

ಈ ಸನ್ನಿವೇಶದಲ್ಲಿ 'ಕನ್ನಡದ ವಾಗ್ರೂಢಿಗಳು' ಬರೆದ ಎಮ್. ರಾಜಗೋಪಾಲಾಚಾರ್ಯರ ಮಾತುಗಳು ಅರ್ಥಪೂರ್ಣ: "ಪ್ರತಿಯೊಂದು ಭಾಷೆಯೂ ಆಯಾ ಪಂಗಡದ ಜನರ ಅಂತರಂಗದ ಅಭಿವ್ಯಕ್ತಿಯ ಮಾಧ್ಯಮ. ಹಾಗಿರುವಾಗ ಎಲ್ಲ ಭಾಷೆಗಳಲ್ಲಿ, ಶಬ್ದಗಳಲ್ಲಿ, ಸಂಕೇತಗಳಲ್ಲಿ, ಪ್ರತಿಮೆಗಳಲ್ಲಿ ಕೆಲವು ಮಟ್ಟಿನ ಸಾಮ್ಯವಿದ್ದರೂ ಅವುಗಳ ಅಂತರಾಳದಲ್ಲಿ ಸ್ಪಂದಿಸುವ ಅರ್ಥವಿಶೇಷ ಆಯಾ ಭಾಷೆಯಲ್ಲಿ ಬೇರೆ ಬೇರೆಯಾಗಿದೆ. ಈ ತಾರತಮ್ಯವೇ ಒಂದು ಭಾಷೆಯನ್ನು ಇನ್ನೊಂದರಿಂದ ಪ್ರತ್ಯೇಕಿಸುತ್ತದೆ."

ಪ್ರತಿ ಭಾಷೆಗೂ ತನ್ನದೇ ಆದ ವೈಶಿಷ್ಟ್ಯ, ತಿರುಳು, ಜೀವನಾಡಿ ಇರುತ್ತದೆ. ಅದು ಅದರ ಸ್ವಾಭಾವಿಕ ಗುಣ. ಆಯಾ ಭಾಷೆಯು ಆಯಾ ತಾಯ್ನುಡಿಯವರಿಗೆ ಹೊಳೆದಂತೆ ಬೇರೆಯವರಿಗೆ ಹೊಳೆಯದು. ಒಂದು ಭಾಷೆಯ ಸಹಜಗುಣವನ್ನು ಇನ್ನೊಂದಕ್ಕೆ ರವಾನಿಸಲಾಗುವುದಿಲ್ಲ. ಆದರೆ ಭಾಷೆಗಳ ಪರಸ್ಪರ ಕೊಡುಕೊಳ್ಳುವಿಕೆ, ಲೇವಾದೇವಿ ನಡೆದೇ ಇದೆ. ಅದರ ವಿನಾ ನಾವು ಬೇರೊಬ್ಬರನ್ನು ತಿಳಿದುಕೊಳ್ಳುವುದು ಬಲು ಕಷ್ಟ ತಾನೆ ?

ಸತತ ಆಘಾತಗಳ ಮೇಲೆ ಆಘಾತಗಳು ಆಗುತ್ತಲೇ ಇದ್ದುದರಿಂದ, ರಾಜಕೀಯವಾಗಿ ಮತ್ತು ಭೌಗೋಲಿಕವಾಗಿ ಒಂದು ಘಟಕವಾಗಿ ಆಕಾರ ಪಡೆಯದೆ ಇದ್ದುದರಿಂದ ಕೊಂಕಣಿ ಭಾಷೆ ಬೆಳೆಯಬೇಕಾದಷ್ಟು ಪುಷ್ಟವಾಗಿ ಬೆಳೆಯಲಿಲ್ಲ. ಅಂಥ ವಾತಾವರಣ, ಅವಕಾಶ ಈ ಭಾಷೆಗೆ ಎಂದಿಗೂ – ಇಂದಿಗೂ ಸಿಗಲೇ ಇಲ್ಲ. ಆದರೂ ಈ ಭಾಷೆಯಲ್ಲಿ ಸುಮಾರು 30 ಅರ್ಥಕೋಶಗಳು, ಅಷ್ಟೇ ಸಂಖ್ಯೆಯ ವ್ಯಾಕರಣ ಗ್ರಂಥಗಳು, ಪತ್ರಿಕೆಗಳು, ಸಾಕಷ್ಟು ಗ್ರಂಥ ಸಾಹಿತ್ಯ, ಕಾವ್ಯ ಇವೆ.

ಭಾರತೀಯ ಭಾಷೆಗಳಲ್ಲೆಲ್ಲ ಕೊಂಕಣಿ ವ್ಯಾಕರಣವು ಪ್ರಥಮವಾಗಿ 1598ರಲ್ಲಿ ಮುದ್ರಿತವಾಯಿತು. ಅದನ್ನು ಬರೆದವರು ಫಾದರ್ ಸ್ಟೀಫನ್. ಆದರೆ ಅವರು ಅದನ್ನು ಕನ್ನಡವೆಂದೇ ತಿಳಿದು, "ಆರ್ತೆ ದಿ ಲಿಂಗುವಾ ಕಾನಾರಿಂ" ಕಾನಾರಿ ಭಾಷೆಯ ವ್ಯಾಕರಣ ಕಲೆ ಎಂದು ಬರೆದಿದ್ದರು. ಕೊಂಕಣಿ ಮಾತೃಭಾಷೆಯವರ ಪ್ರತಿಭೆ, ಕಾಲ, ಶ್ರಮ, ಹಣ ಎಲ್ಲವೂ ಕನ್ನಡ, ಮರಾಠಿ, ಮಲಯಾಳಂ, ಇಂಗ್ಲಿಷ್ ಪೋರ್ಚುಗೀಸ್ ಭಾಷೆಗಳಲ್ಲಿ ಬರೆಯಲು, ಈ ಭಾಷೆಗಳ ಪೋಷಣೆಗಾಗಿ ವಿನಿಯೋಗವಾಯಿತು. ಈಗಲೂ ಆಗುತ್ತ ಇದೆ.

ಕೊಂಕಣಿ ಭಾಷೆಯ ಕುರಿತು ಎಷ್ಟೋ ವಿದ್ಯಾವಂತರಲ್ಲಿ, ಸ್ವತಃ ಕೊಂಕಣಿ ಮಾತನಾಡುವವರಲ್ಲಿ ಕೂಡ, ಅನೇಕ ತಪ್ಪು ಕಲ್ಪನೆಗಳು ಮನೆಮಾಡಿವೆ. ಕೊಂಕಣಿ ಭಾಷೆಗೆ ಲಿಪಿ ಇಲ್ಲ ಎಂಬುದು ಒಂದು ದೊಡ್ಡ ಆರೋಪ. ಆದರೆ ಹಾಗೆ ತಿಳಿಯುವವರಿಗೆ ಸಂಸ್ಕೃತ, ಹಿಂದಿ, ಮರಾಠಿ, ಬಂಗಾಳಿ, ಗುಜರಾತಿ, ಪಂಜಾಬಿ ಮೊದಲಾದ ಯಾವ ಭಾಷೆಗಳಿಗೂ ಸ್ವಂತ ಲಿಪಿ ಇಲ್ಲ ಎಂದು ಗೊತ್ತಿಲ್ಲವೆ? ಇವರೆಲ್ಲ ನಾಗರಿ – ದೇವನಾಗರಿಲಿಪಿಯನ್ನು ಎರವಲು ಪಡೆದುಕೊಂಡರು. ಅದೇ ರೀತಿ ಕೊಂಕಣಿಯೂ ಪಡಕೊಂಡಿತ್ತು. ಆದರೆ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ರಾಜ್ಯಗಳ ಆಶ್ರಯದಲ್ಲಿದ್ದ ಕಾರಣ ಕನ್ನಡ, ರೋಮನ್, ಮಲಯಾಳಂ ಲಿಪಿಗಳಲ್ಲಿ ಬರೆಯುವುದು ಅನಿವಾರ್ಯವಾಯಿತು.

ಲಿಖಿತ ಸಾಹಿತ್ಯ ಮಾತ್ರ ಸಾಹಿತ್ಯ ಎಂಬ ವಿದೇಶೀ ಅಭಿಪ್ರಾಯ ಇತ್ತೀಚೆಗೆ ಭಾರತದಲ್ಲಿ ಮತ್ತೆ ಬದಲಾಗುತ್ತಿದೆ. ಗಟ್ಟಿಯಾದ, ಸತ್ವಪೂರ್ಣ, ಮೌಲಿಕ ಹಾಗೂ ಜೀವಂತ ಸಾಹಿತ್ಯ ಆಡುಭಾಷೆಯಲ್ಲೇ ಇರುತ್ತದೆ. ಈ ಕಾರಣದಿಂದಾಗಿ ನಮ್ಮ ದೇಶದ ಜಾನಪದ ಸಾಹಿತ್ಯದ ಕುರಿತು ನಮ್ಮಲ್ಲಿ ಹೊಸತೊಂದು ಜಾಗೃತಿ ಉಂಟಾಗುತ್ತಿದೆ. ಒಂದು ಭಾಷೆ ಜೀವಂತವಾಗಿರುವುದು ಅದರಲ್ಲಿ ಎಷ್ಟೆಲ್ಲ ಗ್ರಂಥಗಳು ಪ್ರಕಟವಾಗಿವೆ ಎಂಬ ಲೆಕ್ಕಾಚಾರದಿಂದಲ್ಲ; ನಮ್ಮ ದೈನಂದಿನ ವ್ಯವಹಾರಗಳಲ್ಲಿ ಅದು ಎಷ್ಟು ಪರಿಣಾಮಕಾರಿಯಾಗಿದೆ. ಅಭಿವ್ಯಕ್ತಿಯಲ್ಲಿ ಎಷ್ಟು ಸಮರ್ಥವಾಗಿದೆ. ಪರಸ್ಪರ ಕೊಡುಕೊಳ್ಳುವಿಕೆಯಲ್ಲಿ ಎಷ್ಟು ಸಫಲವಾಗಿದೆ ಮತ್ತು ಬದುಕಿನಲ್ಲಿ ಹೇಗೆ ಸಮರಸಗೊಂಡಿದೆ ಎಂಬುದರ ಮೇಲೆ ಒಂದು ಭಾಷೆಯ ಚೈತನ್ಯ ಹೊಂದಿಕೊಂಡಿದೆ. ಶತಮಾನಗಳಿಂದ ಬಂದೆರಗಿದ ಕುತ್ತುಗಳಿಂದ ಪಾರಾಗಿ ಕೊಂಕಣಿ ಇನ್ನೂ ಜೀವಂತವಾಗಿರುವುದೇ ಒಂದು ಪವಾಡ!

ಸಿಂಹಪಾಲು

ಇದಿಷ್ಟು ಹಿನ್ನೆಲೆಯಲ್ಲಿ ಈ ಪ್ರಬಂಧವನ್ನು ವಿಶ್ಲೇಷಣೆಯ ದೃಷ್ಟಿಯಿಂದ ಎರಡು ಮುಖ್ಯ ಹಂತಗಳನ್ನಾಗಿ ಗುರುತಿಸಬೇಕು:

1. ಕೊಂಕಣಿಗರು ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿ ಸಿಂಹಪಾಲು ಕೊಟ್ಟು ಸಮೃದ್ಧಿ ತಂದ 'ವನ್ ವೇ ಟ್ರಾಫಿಕ್' ರೀತಿ.

2. ಕನ್ನಡ – ಕೊಂಕಣಿಗಳ ಪರಸ್ಪರ ವಿನಿಮಯ, ಬೆಳವಣಿಗೆ.

ದಿ. ಮಂಗಳೂರು ಗೋವಿಂದ ಪೈಗಳು, ಕೊಂಕಣಿ – ಕನ್ನಡಗಳ ಕುರಿತು ಮಾತನಾಡುವಾಗ ಒಂದು ಮಾತು ಹೇಳಿದ್ದರು: "ನನ್ನ ಕೊಂಕಣಿತಾಯಿಯ ಮೊಲೆ ಬತ್ತಿಹೋಗಿತ್ತು. ಅದಕ್ಕಾಗಿ ಕನ್ನಡಮ್ಮನ ಮೊಲೆ ಹಾಲು ಹೀರಿದೆ." ಈ ಮಾತನ್ನು ನಾನು ಒಪ್ಪುವುದಿಲ್ಲ. ವಾಸ್ತವಿಕವಾಗಿ ಕೊಂಕಣಿ ತಾಯಿ ಹಾಲು ತುಂಬಿದ ತನ್ನ ಭರ್ತಿ ಮೊಲೆಯನ್ನು ಕನ್ನಡಕ್ಕಾಗಿ ಧಾರೆ ಎರೆದಳು ಎನ್ನುವುದು ಹೆಚ್ಚು ಸರಿಯಾದೀತು. ಏಕೆಂದರೆ ಕೊಂಕಣಿ ಭಾಷೆಯ ಸತ್ವವನ್ನು ಹೊಸಗನ್ನಡ ಸಾಹಿತ್ಯ ಕೃಷಿಗಾಗಿ ಧಾರೆ ಎರೆದು ಕನ್ನಡ ಭಾಷೆಗೆ ಸಿಂಹಪಾಲು ಕೊಟ್ಟು ಅದನ್ನು ಸಮೃದ್ಧ ಮಾಡಿದ ಅನೇಕ ಮೊದಲಿಗರಲ್ಲಿ ಕೊಂಕಣಿ ಮಾತೃಭಾಷೆಯವರು ಅಗ್ರಗಣ್ಯರು ಎಂಬುದರಿಂದ ಈ ಮಾತು ಸಾಬೀತಾಗುತ್ತದೆ. ಹೊಸಗನ್ನಡಕ್ಕೆ ಹಲವು ಸಾಹಿತ್ಯ ಪ್ರಕಾರಗಳನ್ನು ಮೊತ್ತಮೊದಲಾಗಿ ಕೊಟ್ಟವರು ಕೊಂಕಣಿ ಮನೆಮಾತಿನವರು. ಅಂಥ ಕೆಲವು ಉದಾಹರಣೆಗಳು:

1. ಕನ್ನಡಕ್ಕೆ ಮೊದಲಾಗಿ ಸಣ್ಣಕತೆ, ಹರಟೆಗಳ ಮೂಲಕ ಹಾಸ್ಯ ಸಾಹಿತ್ಯ ಮತ್ತು ಬಾಲಸಾಹಿತ್ಯ ಕೊಟ್ಟ ಪಂಜೆ ಮಂಗೇಶರಾಯರು.

2. ಹೊಸಗನ್ನಡ ಕಾವ್ಯಕ್ಕೆ ತಾಯಿಬೇರು ಆಗುವಂಥ 'ಆಂಗ್ಲ ಕವಿತಾಸಾರ' ಬರೆದು, ಕನ್ನಡದಲ್ಲಿ ಮೊದಲಾಗಿ ಸುನೀತ (**Sonnets**) ಗಳನ್ನು ಬರೆದ ಹಟ್ಟಂಗಡಿ ನಾರಾಯಣರಾಯರು.

3. ಕನ್ನಡ ಪತ್ರಿಕೆಗಳನ್ನು ಮೊತ್ತಮೊದಲಾಗಿ ಆರಂಭಿಸಿ ನಡೆಸಿದವರು ಕ್ರೈಸ್ತ ಮಿಶನರಿಗಳಾದರೂ, ಅವರ ಬಳಿಕ ಹಿಂದೂಗಳಲ್ಲಿ ಮೊದಲಿನವರು ಮಂಗಳೂರಿನ 'ಕನ್ನಡ ಕೇಸರಿ' (1885) ಸಂಪಾದಕರಾದ ಮಂಜೇಶ್ವರ ಅನಂತರಾಯರು. 1887ರ ಉಡುಪಿಯ 'ಸುದರ್ಶನ'ದ ಸಂಪಾದಕರಾದ ಬೈಲೂರು ರಾಮರಾಯರು. 1900

ಲ್ಲಿ 'ಸುವಾಸಿನಿ' ಸಾಹಿತ್ಯಿಕ ಪತ್ರಿಕೆ ನಡೆಸಿದ ಬೆನಗಲ್ ರಾಮ ರಾಯರು.

4. ಕನ್ನಡಕ್ಕೆ ಮೊದಲು ಸ್ವತಂತ್ರ ಸಾಮಾಜಿಕ ಕಾದಂಬರಿಗಳನ್ನು ಕೊಟ್ಟ ಗುಲ್ವಾಡಿ ವೆಂಕಟರಾಯರು (ಇಂದಿರಾಬಾಯಿ), ಗುಲ್ವಾಡಿ ಅಣ್ಣಾಜಿರಾಯರು (ರೋಹಿಣಿ), ಬೋಳಾರ ಬಾಬುರಾವ್ (ವಾಗ್ದೇವಿ).

5. ಭಾರತದ ಪ್ರಥಮ ದೇಶೀ ಮುದ್ರಣಾಲಯ (ಕರ್ನಾಟಕ ಪ್ರೆಸ್)ವನ್ನು ಮುಂಬಯಿಯಲ್ಲಿ ಆರಂಭಿಸಿ, ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಆಗುವಂತೆ ಮಾಡಿದವರು. ಮುಂಬಯಿಯಲ್ಲಿ 'ಕನ್ನಡ ಸುವಾರ್ತೆ' ಪತ್ರಿಕೆ ನಡೆಸಿದವರು. ಧಾರವಾಡ ವಿದ್ಯಾವರ್ಧಕ ಸಂಘದ ಸ್ಥಾಪಕರಲ್ಲೊಬ್ಬರಾಗಿದ್ದ ಶ್ಯಾಮರಾವ್ ವಿಠಲ ಕಾಯ್ಕಿಣಿ.

6. ಕನ್ನಡದಲ್ಲಿ ಪ್ರಥಮವಾಗಿ ವೈದ್ಯಕೀಯ ಚಿಕಿತ್ಸೆಯ ಮೇಲೆ ಗ್ರಂಥ ರಚಿಸಿದ ಭಾರದ್ವಾಜ ಶಿವರಾಯರು, ಭೂಗೋಳದ ಕುರಿತು ಬರೆದ ಬೀಜೂರು ವಿಶ್ವೇಶ್ವರ ನಾರಾಯಣರಾಯರು, ಪಶುಚಿಕಿತ್ಸೆ ಕುರಿತು ಬರೆದ ಚಂದಾವರ ಗಣಪಯ್ಯ, ಕಾನೂನು ವಿಷಯದಲ್ಲಿ ಪುಸ್ತಕ ಬರೆದ ಡೊಂಗರಕೇರಿ ಸುಂದರ ರಾಮರಾವ್, ಗಣಿತ ಜ್ಯಾಮಿತಿ ಮತ್ತು ತ್ರಿಗ್ನಾಮಿತ್ರಿ ಪುಸ್ತಕ ರಚಿಸಿದ ಕೇಳ ದೇವರಾವ್, ಕನ್ನಡ ಶೀಘ್ರಲಿಪಿ ರಚಿಸಿದ ನಾಯಲ್ ದೇವರಾವ್.

7. ಕನ್ನಡಕ್ಕೆ ಮೊತ್ತಮೊದಲನೆಯದಾದ ಹೆಸರುಗಳ ಕೋಶ ಕೊಟ್ಟವರು ಬೆನಗಲ್ ರಾಮರಾವ್ ('ಪುರಾಣ ನಾಮ ಚೂಡಾಮಣಿ').

8. ಪ್ರಾಸ ಬಿಟ್ಟು ಕವಿತೆ ಬರೆಯಲು ಆರಂಭಿಸಿದವರು, 'ಇಸು' ಪ್ರತ್ಯಯ ಸೇರಿಸಿ ಕನ್ನಡ ಬರೆದು ಭಾಷೆಯ ಮಡಿವಂತಿಕೆಯನ್ನು ತೊಡೆದುಹಾಕಿ ಭಾಷಾಭಿವೃದ್ಧಿಯಲ್ಲಿ ಕ್ರಾಂತಿ ಮಾಡಿದ ಸಂಶೋಧಕ, ರಾಷ್ಟ್ರಕವಿ ಡಿ. ಗೋವಿಂದ ಪೈ. ಅವರು ಕನ್ನಡ ಶಬ್ದಗಳ ಟಂಕಸಾಲೆಗೆ ಎಷ್ಟೋ ಶಬ್ದಗಳನ್ನು ಹೊಸದಾಗಿ ಕೊಟ್ಟರು. ಉದಾ: ಅಕ್ಷರಿಕೆ (spelling), ಕಣ್ಮರವೆ (over sight), ಮನೆವಳಿಕೆ (homelines), ಸಿಂಹಪಾಲು (lion's share), ಮಂಜರಿ (anthology) ಹೊರಮಾರು (export), ಒಳಮಾರು (import), ಸಂಪ್ರತಿಸು (to copy), ಇತ್ಯಾದಿ ಇತ್ಯಾದಿ (etc etc) ಮೊದಲಾದವು.

9. ಆಡುಮಾತಿನ ಕೊಂಕಣಿಯ ನವಿರಾದ ಹಾಸ್ಯವನ್ನು ಕನ್ನಡಕ್ಕೆ ಬಳುವಳಿಯಾಗಿ ತಂದವರು 'ಹರಟೆಮಲ್ಲ' ಪಂಜೆಯವರು. ಎಂ. ಎನ್. ಕಾಮತ್, ಕುಡ್ಪಿ ವಾಸುದೇವ ಶೆಣೈ, ಪಡುಕೋಣೆ ರಮಾನಂದ ರಾಯರು ಮೊದಲಾದವರು.

10. 'ಅಭಿನವ ಸರ್ವಜ್ಞ'ನೆನಿಸಿ ಚೌಪದಿಯಲ್ಲಿ ಚುಟುಕು ಬರೆದು ಕನ್ನಡ ಕಾವ್ಯದಲ್ಲೇ ಹೊಸ ಪ್ರಕಾರವನ್ನು ಉಂಟುಮಾಡಿದ ದಿನಕರ ದೇಸಾಯಿ.

ಪ್ರಾಕ್ತನ ವಿಮರ್ಶ ವಿಚಕ್ಷಣ, ಆರ್. ನರಸಿಂಹಾಚಾರ್ಯರ 'ಕರ್ನಾಟಕ ಕವಿಚರಿತೆ'ಯ, ಸಂಪುಟಗಳನ್ನು ನೋಡಿದರೆ ಕೊಂಕಣಿ ಮಾತೃಭಾಷೆಯಾಗಿದ್ದು ಕನ್ನಡವನ್ನು ಬೆಳಗಿದ ಎಷ್ಟೋ ಮಂದಿ ಲೇಖಕರ, ಕವಿಗಳ ಹೆಸರು ಸಿಗುತ್ತವೆ. ಇವರಷ್ಟೇ ಅಲ್ಲದೆ ಗೌರೀಶ ಕಾಯ್ಕಿಣಿ, ಯಶವಂತ ಚಿತ್ತಾಲ, ಗಿರೀಶ ಕಾರ್ನಾಡ್, ಆರ್. ಡಿ. ಕಾಮತ್, ಸುಂದರ ನಾಡಕರ್ಣಿ, ಅರವಿಂದ ನಾಡಕರ್ಣಿ, ಜಯಂತ ಕಾಯ್ಕಿಣಿ ಇವರೆಲ್ಲರೂ ಕನ್ನಡಕ್ಕೆ ಕೊಟ್ಟ ಸಾಹಿತ್ಯ ವೈವಿಧ್ಯಪೂರ್ಣ, ಕನ್ನಡದ ಸಮೃದ್ಧಿಯ ಈ ಲಾಭ ಕೊಂಕಣಿ ಭಾಷೆಗಾದ ಅಪಾರ ನಷ್ಟ.

ಹೀಗೆಂದೊಡನೆ ಕನ್ನಡಕ್ಕೆ ಕೊಂಕಣಿ ಭಾಷಿಕರು ಮಾತ್ರ ಕೊಟ್ಟ ದೇಣಿಗೆ ದೊಡ್ಡದು ಎಂದು ಅರ್ಥವಲ್ಲ. ತಮಿಳು, ತೆಲುಗು, ಮರಾಠಿ, ಮಲಯಾಳಂ, ತುಳುಗಳಿಂದಲೂ ಕನ್ನಡ ಭಾಷೆ ಸುಪುಷ್ಟವಾಗಿ ಬೆಳೆದಿದೆ. ಒಂದು ಸಮೃದ್ಧ ಭಾಷೆಯೆಂದರೆ ರುಚಿಕರ ಊಟವಿದ್ದಂತೆ, ಕನ್ನಡದ ರಸಂ, ತಮಿಳರ ಸಾಂಬಾರು, ತೆಲುಗರ ಉಪ್ಪಿನಕಾಯಿ, ಕೊಂಕಣಿಯ ಸುಕ್ಕೆಂ, ತುಳುವರ ಕೊದ್ದೆಲುಗಳಿದ್ದರೇನೇ ಊಟ ನಿಜವಾಗಿಯೂ ಮೃಷ್ಟಾನ್ನವಾಗುತ್ತದೆ.

ಸುಲಿದ ಬಾಳೆ

ಕನ್ನಡ–ಕೊಂಕಣಿ ವಿನಿಮಯದಲ್ಲಿ ಅತ್ಯಂತ ಸುಂದರ ಉದಾಹರಣೆ ಸುಲಿದ ಬಾಳೆಯ ಹಣ್ಣಿನಂತೆ. ಸುಲಲಿತವಾಗಿ, ಸರಳ, ಸುಭಗ, ಅನಾದೃಶ ಭಾಷೆಯಲ್ಲಿ ಬರೆದ ಪಂಜೆ ಮಂಗೇಶರಾಯರ ಸಾಹಿತ್ಯ, ರಾಯಚೂರಿನಲ್ಲಿ 1934ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಅವರು ಮಾಡಿದ 'ಕನ್ನಡದಲ್ಲಿ ಸುಧಾರಣೆಗಳು' ಭಾಷಣದ ಒಂದು ಭಾಗವನ್ನು ಪಂಜೆಯವರ ಶೈಲಿಯಲ್ಲೇ ಓದಿ —

"...... ಈ ಸಂದರ್ಭಕ್ಕೆ ಸರಿಯಾಗಿಯೇ ಎಂಬಂತೆ ನನ್ನ ಪುಳ್ಳಿ* ಯನ್ನು (ಮೊಮ್ಮಗನನ್ನು) ತೊಟ್ಟಿಲಲ್ಲಿಟ್ಟು ನಾಮಕರಣ ಮಾಡಿ ಹಾಡುವ ಕೊಂಕಣಿ ಭಾಷೆಯ ಜೋಗುಳದ ಸೊಲ್ಲೊಂದು ನನ್ನ ಕಿವಿಗೆ ಎಷ್ಟು ಇಂಪಾಗಿ ಕೇಳಿಸುತ್ತದೆ! ಅದನ್ನು ತಾವೂ ಕೇಳಬೇಕೆಂದು ನನ್ನ ಆಸೆ —

"ಜೋ ಜೋ ಕಂದ! ಆಡೀ ಬಾ ಮನೆಗೆ
ಸಂಜೆಯ ವೇಳೆ ಬೆಳಕು ಹಚ್ಚಿ ॥
ಬೆಳಕು ಹಚ್ಚಿ ಮಾಡ್ವೆ ನಿನ ಸೇವೆ।
ರಕ್ಷಿಸು ಕಂದನ ರಕ್ಷಿಸು ದೇವಾ ॥"

ಈ ಜೋಗುಳ ಹಾಡಿನ ಲಾಲಿತ್ಯ, ಸೌಂದರ್ಯ, ಶ್ರುತಿಯು ಕಡಿದು ಹೋಗದಂತೆ ಇರುವ ಮುಕ್ತಪರ ಗ್ರಹಣ ಕೊಂಕಣಿ ಜಾನಪದ ಸತ್ವದ್ದು. ಕಾವ್ಯದ 'ಮಾರ್ಗ' ಮತ್ತು 'ದೇಸೀ' ರಚನೆಯ ಕುರಿತು ಪಂಜೆಯವರು ಹೇಳುತ್ತ ಮೇಲಿನ ಉದಾಹರಣೆ ಕೊಟ್ಟಿದ್ದರು.

ಪಂಜೆಯವರು ಬರೆದ ಮಕ್ಕಳ ಕತೆಗಳಿಗೆ ಸರಿದೂಗುವ ಬಾಲಸಾಹಿತ್ಯ ಕನ್ನಡದಲ್ಲಿ ಬೇರಿಲ್ಲ. ಒಂದು ಉದಾಹರಣೆ: 'ಗುಡುಗುಡು ಗುಮ್ಮಟ ದೇವರು' ಮಕ್ಕಳ ಕತೆ. ಕನ್ನಡದ ಗುಡುಗು ಅಂದರೆ ಕೊಂಕಣಿಯ ಗುಡುಗುಡು. ಈ ಕತೆಯಲ್ಲಿ ಬರುವ ಗುಡುಗುಡು ಶಬ್ದಕ್ಕೆ ಗುಡುಗು ಅರ್ಥ ಮಾತ್ರವಲ್ಲದೆ, ಬೇರೊಂದು ವಿಶೇಷ ಧ್ವನಿತಾರ್ಥವೂ ಬಂದಿದೆ. ಡೋಲಿನ ಒಳಗೆ ಕೂತು ಆಡಿನ ಮರಿ ಕಾಡಿನ ದಾರಿಯಾಗಿ ಹೋಗುವಾಗ ಆಗುವ ಗುಡುಗುಡು ಶಬ್ದ. ಆ ಬಡ ಆಡಿನ ಮರಿಯು ಹುಲಿ, ಸಿಂಹಗಳ ಬಾಯಿಂದ ತಪ್ಪಿಸಿಕೊಳ್ಳುವ ವರೆಗೆ ಅದರ ಎದೆಗುಂಡಿಗೆಯಲ್ಲಿ ಎದ್ದಿರಬಹುದಾದ ಗುಡುಗುಡು ಅನುಭವ, ಮತ್ತು ಇಡೀ ಕತೆಯ ಓಟಕ್ಕೆ ಲಯ ಕೊಡುವ ಈ ಗುಡುಗುಡು ಶಬ್ದದ ಕಲ್ಪನೆ ಎಷ್ಟು ಅರ್ಥಪೂರ್ಣ ಮಕ್ಕಳಿಗೆಷ್ಟು ರೋಮಾಂಚಕಾರಿ!

ಪಂಜೆಯವರ 'ಪದಾರ್ಥವೇನು?' ಪ್ರಬಂಧವೊಂದೇ ಕನ್ನಡ–ಕೊಂಕಣಿ ವಿನಿಮಯಕ್ಕೆ ಅತ್ಯಂತ ಉತ್ತಮ ಉದಾಹರಣೆ. ಆರಂಭದಲ್ಲಿ ಪದಾರ್ಥವೆಂಬ ಪಂಡಿತ ಶಬ್ದ ಹೆಣ್ಣುಮಕ್ಕಳ ಅಡಿಗೆಮನೆ ಹೊಕ್ಕು, ಬಹುಕಾಲ ಅಲ್ಲಿ ಹರಡಿಕೊಂಡು, ಹೆಣ್ಣು ಮಕ್ಕಳು ಪಂಚ್ಯಾಯ್ತಿಕೆ ಆರಂಭಿಸುವ ನಾಂದೀವಾಕ್ಯವೆಂದು ಹುಲುಸಾದ

*ಪುಳ್ಳಿ = ತುಳುವಿನಲ್ಲಿ 'ಮೊಮ್ಮಗ'

ಹಾಸ್ಯದೊಂದಿಗೆ ಗಂಭೀರವಾದ ಸಾಹಿತ್ಯವನ್ನು ಪಂಜೆಯವರು ಸಾಮಾನ್ಯನಿಗೂ ಅರ್ಥವಾಗುವಂತೆ ಹೇಳಿದ್ದಾರೆ. ಆ ಮೇಲೆ —

"ಪದಾರ್ಥವೆಂದರೆ ಊಟದಲ್ಲಿ ಅನ್ನದೊಂದಿಗೆ ಕಲಸಿಕೊಳ್ಳುವ ಕನ್ನಡಿಗರ ಹುಳಿ, ಸಾರು, ತೊವ್ವೆಗಳು, ತುಳುವರ ಕಜಿಪು, ಕೊದ್ದೆಲುಗಳು, ಕೊಂಕಣಿಗರ ಅಂಬಟ, ಗಶ್ಶಿ, ಕಡಿಗಳು" ಎಂದು ವಿವರಿಸಿದ್ದಾರೆ. ಮುಂದಿನ ಅವರ ವಾಕ್ಯಗಳಲ್ಲಿ ಕನ್ನಡ, ಕೊಂಕಣಿ, ತುಳು ಶಬ್ದಗಳು ಹಾಸುಹೊಕ್ಕಾಗಿ ಪ್ರಾಸಬದ್ಧವಾಗಿ ಆಗಿರುವ ಲಯಪೂರ್ಣ ವಿನ್ಯಾಸ ನೋಡಿ: "ಬದನೆ ಬೆಂಡೆಯಂಥ ಪಲ್ಲೆಕಾಯಿ ಸುಟ್ಟೋ, ಕರಿದೊ, ಹುರಿದೊ, ಊಟದ ಹೊತ್ತಿಗೆ ನಂಜಿಕೊಳ್ಳುವುದಕ್ಕಾಗಿ ಮಾಡುವ ಬಜ್ಜಿ, ಗೊಜ್ಜು, ಕೂಟು, ಚಟ್ನಿ, ತಂಬ್ಳಿ ಮೊದಲಾದವು ಪದಾರ್ಥಗಳಲ್ಲಿ ಇತ್ತಲಾಗೆ ಸೇರಿಕೊಂಡಿವೆ. ಹಿಂದಕ್ಕೆ ಅವನ್ನು ಪಲ್ಲೆಗಳೆಂದು ಕರೆಯುತ್ತಿದ್ದರು. ಪದಾರ್ಥಗಳೆಂದು ಹೇಳುತ್ತಿರಲಿಲ್ಲ. ಪಚ್ಚಡಿ, ಕಿಚ್ಚಡಿ, ಕರಿದ ಸಂಡಿಗೆ, ಹುರಿದ ಹೋಳಿಗೆ, ಸುಟ್ಟ ಹಪ್ಪಳ, ಹುಯ್ದ ದೋಸೆ, ಬೆಂದ ಕಡುಬು ಇತ್ಯಾದಿ ಭಕ್ಷ್ಯಭೋಜ್ಯಗಳು ಪದಾರ್ಥಗಳೂ ಅಲ್ಲ, ಪಲ್ಲೆಗಳೂ ಅಲ್ಲ."

ಕನ್ನಡದಲ್ಲಿ ದಿನಬಳಕೆಯಲ್ಲಿರುವ 'ಮೇಲೋಗರ' ಶಬ್ದದ 'ಓಗರ' ಕೊಂಕಣಿ ಕಾಣಿಕೆ ಎಂದು ಪಂಜೆಯವರು ಎಷ್ಟು ಸೂಕ್ಷ್ಮವಾಗಿ ಹೇಳಿದ್ದಾರೆ ನೋಡಿ: " 'ಮೇಲ್' ಮತ್ತು 'ಓಗರ' ಕೂಡಿ 'ಮೇಲೋಗರ' ಎಂಬುದು ಸ್ಪಷ್ಟ. 'ಮೇಲ್' ಇದು ಹುಟ್ಟು ಕನ್ನಡ ನುಡಿ; ಓಗರ ಮಾತ್ರ ಅಚ್ಚಕನ್ನಡ ಇಲ್ಲವೆ ಸಂಸ್ಕೃತದಿಂದ ಜಾತಿಗೆಟ್ಟು ಕನ್ನಡಕ್ಕೆ ಕೂಡುವಳಿಯಾದ ಸಂಸ್ಕೃತ ಓದನ ಶಬ್ದವೋ ಅಥವಾ ಓದನ ಓಗರಗಳೆರಡೂ ಆದಿಯಲ್ಲಿ ಯಾವುದೋ ಒಂದೇ ಬಳ್ಳಿಯಲ್ಲಿ ಹುಟ್ಟಿ, ಹಲವು ತಲೆಮಾರುಗಳ ಹಿಂದೆಯೇ ತವರುಮನೆ ಬಿಟ್ಟು ಬೇರೆಯಾದ ಜೋಡು ನುಡಿಗಳೋ ಎಂಬುದನ್ನು ನಾನರಿಯೆ. ಕನ್ನಡದಲ್ಲಿ 'ಒಗರು' ಎಂಬ ಮಾತು ಉಂಟು; ಈ 'ಒಗರು' ಶಬ್ದದಿಂದ 'ಓಗರ' ಬಹುಶಃ ಬರಲಾರದು. ಕಾದು ತೇವವಾಗುವುದಕ್ಕೆ ಕೊಂಕಣಿಯಲ್ಲಿ 'ಒಗರು' ಎನ್ನುವರು. 'ಮೈ ಕಾದು ಬೆವರು ಒಗರು(ತ್ತದೆ)', 'ಉಪ್ಪು ಒಗರುತ್ತದೆ (ಮೀಟ ಒಗರ್ತಾ)' ಹೀಗೆ ಹೇಳುವುದುಂಟು. ಉಪ್ಪಿನ ಅಗರು ಎಂಬುದು ಉಪ್ಪಾಗುವ ಗದ್ದೆಯಷ್ಟೆ; ಇಲ್ಲಿ 'ಅಗರು', 'ಒಗರು' ಶಬ್ದದ ಮತ್ತೊಂದು ರೂಪ. ಕೊಂಕಣಿಯಲ್ಲಿ ಒಗರು ಕ್ರಿಯಾಪದವಾಗಿ ಬರುತ್ತದೆ. ಕಾದು ತೇವವಾದದ್ದೇ 'ಓಗರ' ಇರಬಹುದೇ? ಓಗರದಿಂದ ಒಗ್ಗರಣೆ ಬಂದಿರಬಹುದೆ? ಒಗರು, ಅಗರು, (ಕರಗು, ಜೀರ್ಣವಾಗು, ತಿನ್ನು) ಓಗರ, ಒಗ್ಗರಣೆ, ಅಗರಣೆ (ಅರ್ಗರಣೆ), ಆರೋಗಣೆ – ಇವುಗಳಿಗೆಲ್ಲ ಬುಡ ಒಂದೆಯೋ ಅಲ್ಲವೋ ಎಂಬುದು ವಿಚಾರಾರ್ಹವಾಗಿದೆ."

ಈ ಭಾಷಾ ವಿನಿಮಯ ಊಟದ ಮೀಟಿಂಗಿನಲ್ಲಿ ಹೇಗಾಯಿತೆಂದು ಪಂಜೆಯವರು ಅದೇ ಪ್ರಬಂಧದಲ್ಲಿ ಸ್ವಾರಸ್ಯಕರವಾಗಿ ಹೇಳುತ್ತಾರೆ. "ಕೊಂಕಣಿಯು ಕನ್ನಡ ಪಲ್ಲೆಕಾಯಿಯಿಂದ 'ಕಾಯಿ' ಎತ್ತಿ ತನ್ನದೇ ಒಂದಾದ 'ರಾಂದಯಿಕಾಯಿ' ಎಂಬ ಹೊಸ ಶಬ್ದವನ್ನು ನಿರ್ಮಿಸಿದ್ದರಿಂದ ಕನ್ನಡಕ್ಕೆ ತೊಂದರೆಯಾಗಲಿಲ್ಲ. 'ಪಲ್ಲೆಕಾಯಿ' ಇಲ್ಲವೇ 'ಕಾಯಿಪಲ್ಯ' ಈ ಮಾತುಗಳು ನಮ್ಮಲ್ಲಿ ಇನ್ನೂ ಇವೆ. ಆದರೆ ಕೆಲವೊಂದು ಕಡೆ ಕನ್ನಡದಿಂದ ಕೊಂಕಣಿಗೆ ಹೋದ ಪದ ಪ್ರಯೋಗವು ಹಿಂದಿರುಗಿ ಬರಲೇ ಇಲ್ಲ. ಅಂಥ ಪ್ರಯೋಗವು ಕನ್ನಡದಲ್ಲಿತ್ತೆಂಬುದಕ್ಕೆ ಹಳೆಗನ್ನಡವೇ ಸಾಕ್ಷಿ, 'ಕೂಡಿಕೊಂಡು' ಎಂಬರ್ಥದಲ್ಲಿ 'ಬೆರಸು' ಎಂಬ ಪ್ರಯೋಗವು ಹಳೆಗನ್ನಡದಲ್ಲಿ ಬೇಕಷ್ಟು ಇದೆಯಷ್ಟೆ!

ಹಳೆಗನ್ನಡ

ಸೇವಕರ ಬೆರಸು
ಪಡೆಬೆರಸಿ ನೂಂಕಿದಂ

ಕೊಂಕಣಿ

ಸೇವಕಾಂಚ್ಯಾ ಬರಶಿ
ಸೈನ್ಯಾಬರಿಶಿ

"ಹೊಸಗನ್ನಡದಲ್ಲಿ 'ಬೆರಸು', 'ಬದಲು', 'ಸಮೇತ', 'ಸಂಗಾತ', 'ಒಡನೆ', 'ಜತೆಯಲ್ಲಿ' – ಹೀಗೆ ಹಲವು ಶಬ್ದಗಳು ರೂಢಿಯಲ್ಲಿವೆ. ಕೊಂಕಣಿಯಲ್ಲಿ 'ಬರಿಶಿ' ಇಲ್ಲದಿದ್ದರೆ ಎಷ್ಟು ಮಂದಿ ಹೆಂಗಸರು ಬಾಯಿಗೆ ಬೀಗ ಹಾಕಬೇಕಾಗಿತ್ತೋ ಯಾರು ಬಲ್ಲರು? "

ಇನ್ನು ಕನ್ನಡವು ಕೊಂಕಣಿಯ 'ಬಾಯಿಗೆ' ಎಷ್ಟು ಬಗೆಯ ಭಕ್ಷ್ಯಾದಿಗಳನ್ನು ಕೊಟ್ಟುಬಿಟ್ಟಿದೆ ಎಂಬುದನ್ನು ಪಂಜೆಯವರು ಕೊಟ್ಟ ಪಟ್ಟಿಯಲ್ಲಿ ನೋಡಿ: ಕನ್ನಡದ 'ಹುಳಿ' ಕೊಂಕಣಿಯ 'ಹೂಳಿ'ಯಾಯಿತು; ಬೆಂದ ತೊಗರಿಪಲ್ಲೆ 'ತೋರಿಬೆಂದಿ' ಆಯಿತು; ಮಜ್ಜಿಗೆ ಕಮ್ಮನೆ ಮಾಡಿದ್ದು 'ತಾಕ್ಕಾ ಕರ್‌ಮಣೆ' ಆಗಿದೆ; ಹೆಚ್ಚಿ ತಯಾರಿಸಿದ್ದು 'ಪಚ್ಚಡಿ', ಕೊಚ್ಚಿ ಮಾಡಿದ್ದು 'ಕೊಚ್ಚೊಳಿ', ಬೇಯಿಸದೆ ಮಜ್ಜಿಗೆ ಬೆರಸಿದ ಹಸಿ ಬಾಳೆದಿಂಡು ಪದಾರ್ಥ ನಮ್ಮಲ್ಲಿ 'ಗಾಬ್ಯೆ ಹಸಿ', ಬಾಳಿಕೆ ಬರುವಂತೆ ಎಣ್ಣೆಯಲ್ಲಿ ಕರಿದದ್ದು 'ಬಾಳಕ', ಕೂಟು 'ಕೂಟ' ಆದುದ್ದ, ಕೋಡುಬಳೆ 'ಕೊಡ್‌ಬಳೆ', ಉಣಲ್‌ಕಾಳು 'ಎಂಡ್ಲಕಾಳು', ಮಾವಿನ ಹಣ್ಣು ಉಣಲ್ 'ಅಂಬ್ಯಾ ಅಂಡುರ್ಲಿ', ಇತ್ಯಾದಿ ಇತ್ಯಾದಿ. ಕೊಂಕಣಿಯಲ್ಲಿ ಕಬ್ಬಿನ ತುಂಡಿಗೆ ಮಾತ್ರ ಕಬ್ಬಾ 'ಕರ್ವೊ' ಎನ್ನುತ್ತೇವೆ. ಈ ಶಬ್ದ ಹಳೆಗನ್ನಡದ 'ಕರ್ವು'ದಿಂದ ಬಂದದ್ದು ಎಂಬುದೂ ಪಂಜೆಯವರ ಸಂಶೋಧನೆ.

ಪಂಜೆಯವರ ಕನ್ನಡ ಕಸ್ತೂರಿಯಾದದ್ದು ಅವರು ಬಳಸಿದ ಕೊಂಕಣಿಯ ಒಗ್ಗರಣೆಯ ಕಂಪಿನಿಂದ. ಈ ಭಾಷೆಯ ವೈಶಿಷ್ಟ್ಯ, ಪ್ರಾದೇಶಿಕತೆಗಳು ಅವರ ಸುಂದರ ಶೈಲಿಯನ್ನು ಇನ್ನಷ್ಟು ಸತ್ವಪೂರ್ಣ ಮಾಡಿದವು. ಅವರ ಹಾಡುಗಳಲ್ಲೂ ಇದೇ ಕುಣಿತ, ಮಣಿತಗಳ ಬೆಡಗು, "ತೆಂಕಣ ಗಾಳಿಯು ಕೊಂಕಣ ಸೀಮೆಗೆ ಬಂತೈ! ಬಂತೈ! ಬಂತೈ! ಬಂತೈ! " ಎನ್ನುವ ಹಾಡಿನಲ್ಲಿ ಮಳೆಗಾಲ ಆರಂಭವಾಗುವ ಪ್ರಕೃತಿಯ ನಾಟಕದ ಟ್ರಾನ್ಸ್‌ಫರ್ ಮತ್ತು ಟ್ರಿಕ್ ಸೀನರಿಗಳ ಅದ್ಭುತ ದೃಶ್ಯಕಾವ್ಯದ ಚಿತ್ರವೇ ಕಣ್ಣಿಗೆ ಕಟ್ಟುತ್ತದೆ. ಈ ಹಾಡಿನಲ್ಲಿ ಕೊಂಕಣಿಯ ಬಳಕೆಯ ಶಬ್ದ ಮತ್ತು ಧ್ವನಿತಾರ್ಥಗಳ ಸಹಾಯದಿಂದ ಮಳೆಗಾಲದ ಆಗಮನದ ವಾತಾವರಣವನ್ನು ಹೇಗೆ ರಚಿಸಿದ್ದಾರೆ ನೋಡಿ —

"ಬರುವುದು !
ಬರಬರ ಭರದಲಿ ಬರುವುದು !
ಬೊಬ್ಬೆಯು ಹಬ್ಬಿಸಿ ಒಂದೇ ಬಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ
ಬೊಬ್ಬುಳಿ ತೆರೆಯನು ದಡಕೆ ಹೊಮ್ಮಿಸಿ
ಅಬ್ಬರದಲಿ ಭೋರ್ – ಭೋರನೆ ಗುಮ್ಮಿಸಿ
ಬಂತೈ ಬೀಸುತ, ಬೀಸುತ ಬಂತೈ
ತೆಂಕಣ ಗಾಳಿಯು ಕೊಂಕಣ ಸೀಮೆಗೆ
ಬಂತೈ! ಬಂತೈ! ಬಂತೈ! ಬಂತೈ!

ಮಾನ್ಯ ವಿ. ಸೀ.ಯವರು ಪಂಜೆಯವರ ನೆನಸಿ ಒಂದು ಮಾತು ಹೇಳಿದ್ದಾರೆ: "ಕೊಂಕಣಿ ಮಾತನಾಡುವ ಸಾರಸ್ವತ ಬ್ರಾಹ್ಮಣ ಕನ್ನಡ ಭಾಷೆಯಲ್ಲಿ ಮುಡಿಯಾಗಬಲ್ಲ ಕೃತಿಗಳನ್ನು ರಚಿಸಿದ ರೆಂಬುದು ಹೊಸ ಕನ್ನಡದ ಪವಾಡ. ಅವಕ್ಕೆ ಸರಿದೂಗುವ ಹಾಡನ್ನು, ರಚನಾ ಸಾಮರ್ಥ್ಯವನ್ನು, ಹಾರ್ದತೆ, ಕಾವುಗಳನ್ನು ನಾವು ಬೇರೆಲ್ಲಿಯೂ ಕಾಣೆವು."

ಕೊಂಕಣಿಯ ಕಂಪು

ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ 'ಇಂದಿರಾ ಬಾಯಿ'ಯ (ಗುಲ್ವಾಡಿ ವೆಂಕಟರಾಯರು) ಒಂದು ಚಿಕ್ಕ ಸಂಭಾಷಣಾ ಭಾಗದಲ್ಲಿ ಎಷ್ಟು ಕೊಂಕಣಿ ಮತ್ತು ತುಳು ಶಬ್ದಗಳು ಹಾಸು ಹೊಕ್ಕಾಗಿ, ಅರ್ಥಕ್ಕೆ ಹೊಸ ಆಯಾಮ ಬಂದಿದೆ ಎಂಬುದಕ್ಕೆ ಒಂದು ಉದಾಹರಣೆ —

"ಇದೇನಯ್ಯಾ, ಈ ಹೊತ್ತು ಇವರ ಗೌಜಿ ಏನೂ ಕೇಳುವುದಿಲ್ಲ? ಚೆನ್ನಾಗಿ ತಿಂದು ಕುಣಿದು ಮಲಗಿಕೊಳ್ಳುವುದಿಲ್ಲವೆ? ಕೋಣಗಳಂತೆ ಮಲಗಿಕೊಂಡಿದ್ದಾರೇನೋ. ತಿನ್ನುವುದು ಸಹಾ ಏನು? ಅಯ್ಯೋ! ಈ ಹೊತ್ತು ಮಾಡಿದ ಗೋರಿಯ ಹುಡಿ ನಾಳೆಗಿಲ್ಲ. ನಾಳೆನದು ನಾಡದಿಗಿಲ್ಲ! ಅಯ್ಯೋ ಇವರ ಹೊಟ್ಟೆಗಳೇ! ಹುಡಿಮಾಡಿ ಮಾಡಿ ನನ್ನ ಕೈಯೆಲ್ಲ ದಡ್ಡುಕಟ್ಟಿ ಹೋಯಿತಷ್ಟೆ! ಇವರ ಮಾರಿಯು ಯಾವಾಗ ಇಳಿದುಹೋಗುತ್ತೋ! ಊರಲ್ಲಿರುವ ಹೆಣ್ಣುಗಳನ್ನೆಲ್ಲ ಎಬ್ಬಿಸಿ ಹಾಕುವುದಲ್ಲವೆ ಇವರ ವ್ಯಾಪಾರ? "

ಹುಡುಗಿಯರನ್ನು ಹಾರಿಸಿಕೊಂಡು ಹೋದರು ಎನ್ನುವುದಕ್ಕೆ ಇಲ್ಲಿ ಕೊಂಕಣಿ ಧಾಟಿಯ 'ಎಬ್ಬಿಸಿ ಹಾಕುವುದು' (ಉಬ್ಬಾರ್ರೆಂ) ಅಂದಿದ್ದಾರೆ. ಅದೇ ರೀತಿ 'ಮಾರಿಯು ಇಳಿದುಹೋಗುವುದು' ತುಳುವಿನ 'ಮಾರಿ ಜೆತ್ತ್ರದ್ ಪೋವಡ್' ಇದರ ಕನ್ನಡೀಕರಣ. ಇಂಥ ಪ್ರಾದೇಶಿಕತೆಯ ಸೊಗಸು, ವ್ಯಂಗ್ಯಾರ್ಥಗಳಿಂದ, ಭಾಷೆಗೆ ಕುಂದಣವಿಟ್ಟಂತೆ ಆಗುತ್ತದೆ.

ಕೊಂಕಣಿಯ ಕುಂದಣವನ್ನು ಕನ್ನಡಕ್ಕೆ ಹಾಕಿದವರಲ್ಲಿ ಮತ್ತು ಅದೇ ರೀತಿ ಕನ್ನಡದ ಸೌಂದರ್ಯವನ್ನು ಕೊಂಕಣಿಗೆ ತಂದ ಅಪೂರ್ವ ಕವಿ, ಲೇಖಕ ದಿನಕರ ದೇಸಾಯಿಯವರು. ನಿಜಕ್ಕೂ ಅವರು ಕನ್ನಡ–ಕೊಂಕಣಿ ಸವ್ಯಸಾಚಿ. ಈ 'ಅಭಿನವ ಸರ್ವಜ್ಞ' ಚೌಪದಿ ಯಲ್ಲಿ ಚುಟುಕು ಬರೆದು ಚುರುಕು ಮುಟ್ಟಿಸುತ್ತಲೇ ಇದ್ದಾರೆ. ತನ್ನ ಕನ್ನಡ–ಕೊಂಕಣಿ ಪ್ರೀತಿಯನ್ನು ಅವರು ಹೀಗೆ ಹೇಳಿಕೊಂಡಿದ್ದಾರೆ —

ನನ್ನ ಜೀವನಾಡಿ

ಕೊಂಕಣಿಯು ಜೊತೆಗೆ ಕನ್ನಡ ಮಾತನಾಡಿ
ಒಂದುಗೂಡಿದವು ಎರಡು ಜೀವನಾಡಿ
ಎರಡು ಪಕಳೆಯ ಹೂವು ಮಿಡಿಯಾಗಿ ಕಾಯಿ
ಕಾಯಿ ಹಣ್ಣಾದೊಡನೆ ಜೀವನ ಮಿಠಾಯಿ

ದಿನಕರ ದೇಸಾಯಿಯವರು ತನ್ನ ಬಾಲ್ಯದಿಂದಲೇ ಕೊಂಕಣಿಯಲ್ಲಿ ಬರೆಯಲಾರಂಭಿಸಿದ್ದರು. ಅವರು ಕೊಂಕಣಿಯಲ್ಲಿ ಬರೆದ ಚೌಪದಿ ಗಳೂ ಅಷ್ಟೇ ಚೆಂದ. ಒಂದು ದೃಷ್ಟಿಯಲ್ಲಿ ಅವರ ಕನ್ನಡ ಚುಟುಕ ಗಳಿಗೆ ಕೊಂಕಣಿ ಚುಟುಕುಗಳೇ ನಾಂದಿ. ಅವರ ತಾರುಣ್ಯದಲ್ಲಿ 'ಮೊಗರೆಂ' ಅಂದರೆ ಮಲ್ಲಿಗೆ ಎಂದು ಕಾಲ್ಪನಿಕ ಪ್ರೇಯಸಿಯ ಕುರಿತು ಅವರು ಬರೆದ ಚುಟುಕುಗಳು. ಸುಂದರ ಭಾವಗೀತೆಗಳೇ. ಅವುಗಳಲ್ಲಿ ಒಂದು —

ಲಿಕಿ ಲಿಕಿ ದೊಳೆ ತುಳತುಳಿ ಪೊಲೆ
ಕೆಸಚ ಕಾಳೆ ಮುದಿಯಾಳೆ
ಕೆಸಚ ಕಾಳೆ ಕುರವಾಳೆ ಮೊಗಾ
ತಾಜೆರ ಕಳೆ ಮೊಗರ್ಯಾಚಿ

(ಮಿನುಗುವ ಕಣ್ಣುಗಳು, ಮೃದು ಗಲ್ಲಗಳು, ಗುಂಗುರು ಗುಂಗುರಾದ ಕಪ್ಪು ಕೂದಲು, ಅದರ ಮೇಲೆ ಮಲ್ಲಿಗೆಯ ಮೊಗ್ಗು ಗಳು.)

ಭಾಷೆಯ ಹದ, ಸಂಯಮ, ಮಾತಿನ ಮೊನಚು, ಚಾಟಿಯ ಏಟಿನಂಥ ಧ್ವನಿಯ ಕೊಂಕು ಇವುಗಳಿಂದ ಕನ್ನಡದಲ್ಲಿ ಅನ್ವರ್ಥಕವಾಗಿ 'ದಿನಕರನೊಬ್ಬನೆ' ಎಂದು ಪ್ರಶಂಸೆ ಪಡೆದ ದಿನಕರ ದೇಸಾಯಿ ಯವರು ಮೂಲತಃ ಕೊಂಕಣಿಯಲ್ಲಿ ಬರೆದ 'ಗೊಜಡಿ' ಎಂಬ ಕವನ ಕನ್ನಡದಲ್ಲಿ 'ಕದಿ' ಎಂದು, 'ಸ್ವರ್ಗಾವೈಲೊ ದೇವು'='ಸ್ವರ್ಗ ದಲ್ಲಿಯ ದೇವ' ಎಂದು ಅವರಿಂದಲೇ ಬರೆಯಲ್ಪಟ್ಟಿವೆ. ದಿನಕರರಿಗೆ ಕೊಂಕಣಿ ಸಾಹಿತ್ಯದ ಕೊರತೆ ಚೆನ್ನಾಗಿ ಗೊತ್ತು. ಕನ್ನಡದ ಶ್ರೀಮಂತಿ ಕೆಯೂ ಗೊತ್ತು. ಆದರೆ ಅವರು ಕೊಂಕಣಿಯಲ್ಲಿ ಬರೆಯುವುದನ್ನು ಸುಮಾರು 35 ವರ್ಷಗಳ ಹಿಂದೆಯೇ ಬಿಟ್ಟುಬಿಟ್ಟರು.

ಕೊಂಕಣ ಆಮಚಿ ತೊಕಣೆಚಿ
ಮಾಟು ಮೊಗಾಚಿ ಆವಡೀಚಿ
ಕೊಂಕಣ ಜಮೀನ ಪೀಕಾಳ
ಪೂಣ ಪಡಲಾ ದುಷ್ಕಾಳ
ಆಮಿ ಸಾಹಿತ್ಯ ರೊಯಲ್ಯಾರ
ಪಿಕತಲೆ ಸಾಮಕೆ ಭಾಂಗರ

"ನಮ್ಮ ಮುದ್ದಿನ ಕೊಂಕಣಿ ಜಮೀನಿನಲ್ಲಿ ದುಷ್ಕಾಳ ಬಿದ್ದಿದೆ. ಸಾಹಿತ್ಯವನ್ನು ಅಲ್ಲಿ ಬಿತ್ತಿದರೆ ಬಂಗಾರದ ಬೆಳೆ ತೆಗೆಯಬಹುದು" ಎಂದು ದಿನಕರರು ಹಾಡುತ್ತ ಹಾಡುತ್ತ ಕೊನೆಗೂ ಕೊಂಕಣಿಗೆ ಕೈಕೊಟ್ಟು ಕನ್ನಡವನ್ನೇ ಅಪ್ಪಿಕೊಂಡು ಅದನ್ನು ಬಂಗಾರ ಮಾಡಿ ಬಿಟ್ಟರು.

ನನ್ನ ಕನ್ನಡ ನುಡಿಯೆ, ನೀನೆಷ್ಟು ಚೆಂದ !
ಏನು ಗೀಚಿದರೂ ಆಗುವುದು ಶ್ರೀಗಂಧ
ಸಿರಗಂ ಗಣಿ ನಿನ್ನ ಶಬ್ದ ಸಂಪತ್ತು
ಬಂಗಾರಕ್ಕಿಂತಲೂ ಶ್ರೇಷ್ಠ ನಿನ್ನ ನುಡಿಮುತ್ತು!

ಕನ್ನಡದ ಈ ಬಂಗಾರಕ್ಕೆ ಕೊಂಕಣಿಯ ಒಪ್ಪಕೊಟ್ಟ ಇನ್ನೂ ಕೆಲವರಲ್ಲಿ ಮುಖ್ಯವಾಗಿ, ಉತ್ತರ ಕನ್ನಡ ಜಿಲ್ಲೆಯ ಕತೆಗಾರ–ಕಾದಂಬರಿಕಾರ ಯಶವಂತ ಚಿತ್ತಾಲ, ಸುಂದರ ನಾಡಕರ್ಣಿ, ಗೌರೀಶ ಕಾಯ್ಕಿಣಿ ಅವರ ಕೊಡುಗೆಗಳು ಅಮೂಲ್ಯ. ಇವರ ಬರಹಗಳಲ್ಲಿ ಭರಪೂರ ಮಣ್ಣಿನ ವಾಸನೆ – ಅಲ್ಲ, ಪರಿಮಳ ತುಂಬಿದೆ.

ಚಿತ್ತಾಲತನವೆ ಒಂದು ವಿಶಿಷ್ಟ ಶೈಲಿಯಾಗಲು ಅವರ ಕನ್ನಡ ಭಾಷೆಯ ರಾಜರಸ್ತೆಯಲ್ಲಿ ಕೊಂಕಣಿ ಅಭಿವ್ಯಕ್ತಿಯ ಆತ್ಮೀಯ ದಣಪೆ, ಗದ್ದೆ ಹುಣಿ, ಗಲ್ಲಿ, ಓಣಿ, ಸಂಪಿಗೆಯ ಮರಗಳು ಹಾದು ಹೋಗುವುದೇ ಕಾರಣ. ಕೊಂಕಣಿಯಂತೆಯೆ ಅವರ ಕನ್ನಡ ಭಾಷೆ ಆಡುಮಾತಾಗಿ ಜೀವಂತಿಕೆಯಿಂದ ಕೂಡಿರುತ್ತದೆ. ಚಿತ್ತಾಲ ಸಾಹಿತ್ಯ ಝರಿಗೆ ಕೊಂಕಣಿ ಮೂಲ, ಉಗಮ; ಮುಂದೆ ಅದು ಕನ್ನಡದ ದಭದಭೆಯಾಗಿ ಹೊರಹೊಮ್ಮಿದೆ.

ಸುಂದರ ನಾಡಕರ್ಣಿಯವರ ಬರಹಗಳಲ್ಲಿಯೂ ಕೊಂಕಣಿಯ ಸತ್ವ ಅಲ್ಲಲ್ಲಿ ಚಿಮ್ಮುತ್ತದೆ. ಚಿತ್ತಾಲರು 'ಆಟೋಲಿನ' ಎಂದು

ಕೊಂಕಣಿ ಹೆಸರಿನ, ಕೊಂಕಣಿ ವಾತಾವರಣದ ಕತೆ ಬರೆದರೆ, ಸುಂದರ ನಾಡಕರ್ಣಿಯವರ 'ಮೋಹಿತರು', ಅದಕ್ಕಿಂತ ಹೆಚ್ಚಾಗಿ 'ಮಂದೀ ಮನೆ' ಅಚ್ಚ ಕೊಂಕಣಿ ಮನೆತನದ ವಾತಾವರಣವನ್ನೇ ಸೃಷ್ಟಿಸಿದೆ.

ಗೌರೀಶ ಕಾಯ್ಕಿಣಿಯವರು ಎಷ್ಟು ಗಂಭೀರ ಲೇಖಕರೋ ಅಷ್ಟೇ ಹಾಸ್ಯಪ್ರವೃತ್ತಿಯವರು. ಎಷ್ಟು ವೈಚಾರಿಕರೋ ಅಷ್ಟೇ ಮುಗ್ಧವಾಗಿ ನಗಬಲ್ಲರು. ನಗಿಸಬಲ್ಲರು. ಅವರ ಈ ವಿಶಿಷ್ಟ, ವಿರಳ ಗುಣಕ್ಕೆ ಕೊಂಕಣಿಯ ಸೊಗಸೂ ಕಳೆಯಿತ್ತಿದೆ. ಕಾರವಾರ ಸಾಹಿತ್ಯ ಸಮ್ಮೇಳನದಲ್ಲಿ 'ಸಿರಿಗನ್ನಡಂ ಗೆಲ್ಗೆ' ಎಂದಾಗ ಗೌರೀಶರು ತನ್ನ ಪತ್ನಿಯ ಕಡೆ ಅರ್ಥಪೂರ್ಣವಾಗಿ ನೋಡಿ ಕೈಬೀಸಿದರಂತೆ. 'ಗೆಲ್ಗೆ' ಅಂದರೆ ಕೊಂಕಣಿಯಲ್ಲಿ ಹೋಯಿತು ಎಂದು ಅರ್ಥ.

ಕನ್ನಡದ ಋಣ

ಕೊಂಕಣಿ ಭಾಷೆಯಲ್ಲಿ ಸಂಸ್ಕೃತ ಮತ್ತು ಪ್ರಾಕೃತಜನ್ಯ ಶಬ್ದಗಳ ಬಳಿಕ ದ್ರಾವಿಡ ಮೂಲವಾದ ಕನ್ನಡ, ತುಳು ಶಬ್ದಗಳೇ ಜಾಸ್ತಿ. ಕನ್ನಡದಿಂದ ಕೊಂಕಣಿಗೆ ಕೆಲವು ಸಾವಿರ ಶಬ್ದಗಳು ಬಳುವಳಿಯಾಗಿ ಹೋಗಿವೆ. ಕೊಂಕಣಿಗೆ ಕನ್ನಡದ ಋಣ ಭಾರಿ ದೊಡ್ಡದು. ದಿನ ಬಳಕೆಯ ಅರೆ, ಛೀ ಶಬ್ದಗಳಿಂದ ಹಿಡಿದು, ಪ್ರೌಢ ಸಾಹಿತ್ಯಿಕ ಶಬ್ದಗಳೂ ಇಡಿಯಾಗಿ, ಬಿಡಿಯಾಗಿ, ರೂಪು ಬದಲಾಯಿಸಿ ಕೊಂಕಣಿಗೆ ವಲಸೆ ಹೋಗಿವೆ. ಇಡೀ ಇಡೀ ನಾರೆಗಳೂ ಕೊಂಕಣಿ ಸೇರಿವೆ. ಕನ್ನಡದ ಸಮಾನಾರ್ಥಕ ಪದಗಳ ಜೋಡುನುಡಿಗಳನ್ನು ಕೊಂಕಣಿ ಪಡಕೊಂಡಿದೆ (ಉದಾಹರಣೆಗೆ: ಘಟಾಪಟಿ, ರೀತಿರಿವಾಜು, ಲಂಗುಲಗಾಮು, ಕಾಕಪ್ರೋಕ, ಗಟ್ಟಿಮುಟ್ಟು, ಗಪ್ಪುಚಿಪ್ಪು, ಗಿಜಿಬಿಜಿ, ತರಾತುರಿ, ನಯ ನಾಜೂಕು, ಮಾನಮರ್ಯಾದೆ, ಸರ್ವಸಾಧಾರಣ. ಇತ್ಯಾದಿ ಇತ್ಯಾದಿ.)

ಅದೇ ರೀತಿ ಅಚ್ಚಕನ್ನಡ ಶಬ್ದಗಳೆಂದು ತಿಳಿದ ಎಷ್ಟೋ ಶಬ್ದಗಳು ಸಂಸ್ಕೃತ, ಪ್ರಾಕೃತಗಳಿಂದ ಕೊಂಕಣಿಯ ಮೂಲಕ ಕನ್ನಡ ಸೇರಿದ್ದೂ ಉಂಟು.

ಸಂಖ್ಯೆ	ಮೂಲ ಸಂಸ್ಕೃತ/ಪ್ರಾಕೃತ	ಕೊಂಕಣಿ	ಕನ್ನಡ
1.	ಉಪಡಕರಣ	ಉಡಗೆರೆ	ಉಡುಗೊರೆ
2.	ಪುತ್ರಕ (ಪುಡಗೊ)	ಬುರಗೊ	ಹುಡುಗ *
3.	ಪಕ್ಷ + ವಂಶ	ಪಖ್ಯಾಚೊ ವಾಸೊ (ಪಕ್ಕಾಸೊ)	ಪಕ್ಕಾಸು
4.	ಇಷ್ಟಿಕಾ	ಇಟ್ಟಿಗಾ	ಇಟ್ಟಿಗೆ
5.	ಉಡಿದೊ	ಉಡಿದು	ಉದ್ದು
6.	ಉದ್ವರ್ತಿತ	ಉದಬತ್ತಿ	ಊದುಬತ್ತಿ
7.	ಕುಟಃ	ಗುಡ್ಡೊ	ಗುಡ್ಡ
8.	ಕರ್ಮಕಾರ	ಕರ್ಮಕಾರು	ಕಮ್ಮಾರ
9.	ಅಪೂರ್ವ	ಅಪರೂಪ	ಅಪರೂಪ
10.	ಆಜ್ಞಾ	ಆಣ	ಆಣೆ
11.	ಉದೀರ	ವದರು	ಒದರು
12.	ಅವಲೋಕ	ಓಲಗ	ಓಲಗ
13.	ಆಡಗಾಧಾ	ಆದಗತಿ	ಗಾದೆ
14.	ಆತ್ಮವತ್	ಅಪ್ಪಂತು	ಅಪ್ಪಂತ
15.	ಅನ್ನಪುನಸಃ	ಅನನಾಸ	ಅನಾನಸು
16.	ಭಂಗಾರ	ಭಾಂಗಾರ	ಬಂಗಾರ
17.	ವಾಪೀ	ಬಾಯಿಂ	ಬಾವಿ
18.	ಅಂಬೋಧ	(ಅಂ) ಮೋಡ	ಮೋಡ
19.	ಮರಾಳ	ಮಾಡ	ಮಾಡ
20.	ವಿರಾಜ್	ಮಿರವನಿಕಾ * *	ಮೆರವಣಿಗೆ
21.	?	ಓಗರ	ಓಗರ
22.	ಯುಗ/ಉಗ	ನುಗ	ನೊಗ
23.	ಮುಂಡ	ಬೋಡ (ಬೊಡಾಯಿ)	ಬೋಳು (ಬೋಳಿಸು)
24.	ಖರಜೂ	ಖರಜೂ (ಜಿ)	ಕಜ್ಜಿ
25.	ವಟರ	ಮಡಲ	ಮಡಲು
26.	ಕನಿಶ	ಕಣಸ	ಕಣಸು
27.	ಕರ್ದನ	ಕರನ	ಕರನ
28.	ಕೃಚ್ಛ	ಕಿಚ್ಚು	ಕಿಚ್ಚು
29.	ಕೂಪಸಿ	ಕುಬ್ಬಸ	ಕುಬ(ಪ್ಪ)ಸ
30.	ಕೂಟ	ಗುಟ್ಟು	ಗುಟ್ಟು

* ಶಂ. ಬಾ. ಜೋಶಿಯವರು 'ಕನ್ನಡ ನುಡಿಯ ಹುಟ್ಟು'ನಲ್ಲಿ 'ಹುಡುಗ' ಶಬ್ದ ಕನ್ನಡ ಅಲ್ಲ ಎಂದಿದ್ದಾರೆ.
** ಅಣ, ಆರೆ, ಇಕಾ ಕೊಂಕಣಿ ಪ್ರತ್ಯಯಗಳು.

ಭಾರತೀಯ ಭಾಷೆಗಳಲ್ಲೆಲ್ಲ ಪ್ರಥಮವಾಗಿ ಮುದ್ರಿತವಾದ ಕೊಂಕಣಿ ಭಾಷೆಯ ವ್ಯಾಕರಣ – ಫಾದರ್ ಸ್ಟೀಫನ್ಸ್ ಅವರ "ಆರ್ತೆ ದಾ ಲಿಂಗುವಾ ಕಾನಾರಿಂ" – 1598ರಲ್ಲಿ: ಅದರ ಮುಖಪುಟ. ಗೋವೆಯಲ್ಲಿ ಆಗ ಮಾತನಾಡುತ್ತಿದ್ದುದು "ಉತ್ತರದ ಕಾನರಿ" ಎಂದು ಪೋರ್ಚುಗೀಸ್ ಮಿಶನರಿಗಳು ತಿಳಿದಿದ್ದರು. ಆದರೆ ಈ ಭಾಷೆ ಇಂದಿನ ಕೊಂಕಣಿಗೆ ತೀರಾ ಹತ್ತಿರವಿತ್ತು.

ಕೊಂಕಣಿಯ ಶಬ್ದಾರ್ಥ ಸಂಪತ್ತು ಕನ್ನಡದ ಸತ್ವ ಹೆಚ್ಚಿಸುವಂತೆ ಪೂರಕವಾಯಿತು. ಕನ್ನಡದಲ್ಲಿ ಬಹುದೊಡ್ಡ ಗ್ರಂಥಸ್ಥ ಸಾಹಿತ್ಯವಿದೆ. ಪ್ರಾಚೀನ ಸಾಹಿತ್ಯ ಲಭ್ಯವಿದೆ. ಕೊಂಕಣಿಗೆ ಆ ಅದೃಷ್ಟ ಇಲ್ಲ. ಅದು ಆಡುಭಾಷೆಯಾಗಿ ಬದುಕಿದೆ ಹೊರತು ಗ್ರಂಥಸ್ಥ ಸಾಹಿತ್ಯದಿಂದ ಮಾತ್ರ ಅಲ್ಲ. ಹಾಗಾಗಿ ಕನ್ನಡದಿಂದ ಕೊಂಕಣಿಗೆ ಶಬ್ದಪ್ರವಾಹ ಹೋದ ಓಘದಿಂದ ಉತ್ತರ ಮತ್ತು ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಕೊಂಕಣಿಯಲ್ಲಿ ಕೊಂಕಣಿತನವೇ ಕುಸಿಯತೊಡಗಿದೆ. ಈ ವೈಪರೀತ್ಯ ಎಷ್ಟರ ಮಟ್ಟಿಗೆ ಆಗಿದೆ ಎಂದರೆ ಕೊಂಕಣಿ ಭಾಷೆಯಲ್ಲಿ ಮೊದಲಾಗಿ ಭಾಷೆ ಕಲಿಯುವಾಗ ಹೇಳುವ ಅಮ್ಮ – ಅಪ್ಪನನ್ನು ಹೇಗೆ ಕರೆಯುವುದು ಎಂಬುದನ್ನೂ ಮರೆಯಲಾರಂಭಿಸಿದ್ದಾರೆ.

ಸಂಸ್ಕೃತದ 'ಬಪ್ಪ'ದಿಂದ ಕೊಂಕಣಿಯ ಬಾಪೊಯ್, ಬಾಪ್ಪಾ ಮತ್ತು 'ಆರ್ಯಾ'ದಿಂದ ಆವಯಿ ಬಂದದ್ದು. ಕೊಂಕಣಿ ಮಾತನಾಡುವವರು ಆವೊಯ್ – ಬಾಪೊಯ್ ಬಿಟ್ಟುಬಿಟ್ಟು ಅಮ್ಮ – ಅಪ್ಪ ಹಿಡಿದು, ಈಗ ಮಮ್ಮಿ – ಡ್ಯಾಡಿಗೆ ಇಳಿದಿದ್ದಾರೆ! ಕರ್ನಾಟಕದ ಕಡೆ ಹೀಗಾದರೆ ಮಹಾರಾಷ್ಟ್ರದಲ್ಲಿರುವ ಕೊಂಕಣಿಗರು ಮರಾಠಿ ಭಾಷಾ ಗುಲಾಮರಾಗಿದ್ದಾರೆ.

ಕೊಂಕಣಿ ಭಾಷೆಯ ಸತ್ವ, ಸಮೃದ್ಧಿಗಳ ಅರಿವು ಸ್ವತಃ ಕೊಂಕಣಿಗರಿಗೇ ಇಲ್ಲ. ಸಾವಿರಾರು ವರ್ಷಗಳಿಂದ ಬೆಳೆಸಿಕೊಂಡ ದಾಸ್ಯ ಭಾವನೆ, ಅಭಿಮಾನ ಶೂನ್ಯತೆ ಹೆಪ್ಪುಗಟ್ಟಿಕೊಂಡಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಕೊಂಕಣಿಯು ಸ್ವತಂತ್ರ ಭಾಷೆ ಎಂದು ಮಾನ್ಯತೆ ಕೊಟ್ಟ ಅಭಿಮಾನ ಹಾಗೂ ಜವಾಬ್ದಾರಿಯ ಜಾಗೃತಿಯೂ ಉಂಟಾಗಿಲ್ಲ. ಮರಾಠಿ ಭಾಷಾ ದುರಭಿಮಾನಿಗಳ ಚಾವಟಿ ಏಟು ಕೂಡಾ ತಾಗಿಲ್ಲ. ಇದನ್ನೆಲ್ಲಾ ನೋಡುವಾಗ 'ಕೊಂಕಣಿ ಭಾಷೆ ಮತ್ತು ಸಾಹಿತ್ಯ' ಕುರಿತು ಸರಿಯಾಗಿ ನೂರು ವರ್ಷಗಳ ಕೆಳಗೆ ಮುಂಬಯಿ ಗರ್‍ಝೆಟಿಯರ್‌ನಲ್ಲಿ ಬರೆದ ಗೆರ್ಸನ್ ಡಾ. ಕುನ್ಹಾ ಹೇಳಿರುವ ಮಾತು ನಿಜವಾಗಬಹುದೇನೋ ಎಂಬ ಭೀತಿ ಉಂಟಾಗುತ್ತದೆ.

"ಮುಂದಿನ ಒಂದೆರಡು ಶತಮಾನಗಳಲ್ಲಿ ಕೊಂಕಣಿ ಭಾಷೆಯ ಮೇಲೆ ಉತ್ತರದಿಂದ ಮರಾಠಿ ಹಾಗೂ ದಕ್ಷಿಣದಿಂದ ಕನ್ನಡದ ಆಕ್ರಮಣ ಹೆಚ್ಚಾಗುತ್ತದೆ. ಈಗಾಗಲೇ ಇದರ ಆರಂಭವಾಗಿದೆ. ಈ ಹೋರಾಟದಲ್ಲಿ ಕೊಂಕಣಿ ನಾಶವಾಗಬಹುದು. ಇತಿಹಾಸದಲ್ಲಿ ಹೀಗೇ ನಡೆದದ್ದುಂಟು. ಜಗತ್ತಿನ ಚರಿತ್ರೆಯಲ್ಲಿ ದುರ್ಬಲ ಜನಗಳ, ದುರ್ಬಲ ನಾಡಿನ ಮತ್ತು ದುರ್ಬಲ ಭಾಷೆಗಳ ಅಂತ್ಯ ಇದೇ ರೀತಿ ಆಗಿದೆ."

ಇಂದು ಕನ್ನಡದಲ್ಲಿ ಸಶಕ್ತ ಸಾಹಿತ್ಯ ನಿರ್ಮಾಣವಾಗಿದೆ. ಅದಕ್ಕೆ ಭರಪೂರ ರಾಜಾಶ್ರಯವೂ ಇದೆ. ಕನ್ನಡ ಜನರೂ ಎಚ್ಚತ್ತಿದ್ದಾರೆ. ಕನ್ನಡ ಲೇಖಕರ ಹಾಗೂ ಓದುಗರ ಬಲು ದೊಡ್ಡ ಬಳಗ ಬೆಳೆದಿದೆ. ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ನಡೆದಿದೆ. ಕನ್ನಡದ ಅಭಿವೃದ್ಧಿಗೆ ಸಹಕಾರಿಯಾಗುವಂಥ ವಾತಾವರಣ ಉಂಟಾಗಿದೆ. ಆದರೆ ಕೊಂಕಣಿ ಇನ್ನೂ ರಾಜಕೀಯ ಚದುರಂಗದಾಟದಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿದೆ. ಅಸ್ತಿತ್ವಕ್ಕಾಗಿ ಪೇಚಾಡುತ್ತಿದೆ. ಭಾಷಾ ವಿನಿಮಯದಲ್ಲಿ ಕೊಂಕಣಿ ಮಾಯವಾಗಬಹುದು. ದೊಡ್ಡ ಭಾಷೆ ಸಣ್ಣ ಭಾಷೆಯನ್ನು ನುಂಗಿಹಾಕುವುದು ಪ್ರಕೃತಿಧರ್ಮ ತಾನೆ?

ಸಂಸ್ಕೃತ, ಇಂಗ್ಲೀಷು, ಹಿಂದಿ ಭಾಷೆಗಳ ಆಕ್ರಮಣ ತಡೆಯಲು ಕನ್ನಡಿಗರು ಆಗಿಂದಾಗ್ಗೆ ಪ್ರತಿಭಟನೆ ಮಾಡುತ್ತಲೇ ಇದ್ದಾರೆ. ಅದೇ ರೀತಿ ಮರಾಠಿ ಮತ್ತು ಕನ್ನಡದ ಆಕ್ರಮಣವನ್ನು ತಡೆಯಲು ಕೊಂಕಣಿಗರು ಜಾಗ್ರತರಾಗಿ ಕಾರ್ಯಪ್ರವೃತ್ತರಾಗದಿದ್ದರೆ ಗೆರ್ಸನ್ ಡಾ. ಕುನ್ಹಾ ಹೇಳಿದ ಮಾತು ನಿಜವಾಗಬಹುದು. ಗೋವೆಯನ್ನು 1510ರಲ್ಲಿ ಕಬಳಿಸಿ, ಅಲ್ಲಿಯ ಕೊಂಕಣಿ ಭಾಷೆಯನ್ನು ಧ್ವಂಸ ಮಾಡುತ್ತೇನೆಂದು ಪಣತೊಟ್ಟ ಅಲ್ಫೊನ್ಸೊ ಅಲ್ಬುಕರ್ಕ್ ತನ್ನ ಗೋರಿಯಲ್ಲೇ ಗೆಲುವಿನ ನಗು ನಗುತ್ತಾ ಇರಬಹುದು.

ಐತಿಹಾಸಿಕ ದಿನಗಳು

- ಅಖಿಲ ಭಾರತ ಕೊಂಕಣಿ ಸಾಹಿತ್ಯ ಪರಿಷತ್ತಿನ ಜನನ 8 – 7 – 1939
- ಮುಂಬಯಿಯಲ್ಲಿ ಕೊಂಕಣಿ ಭಾಷಾ ಮಂಡಳ ಸ್ಥಾಪನೆ 5 – 4 – 1942
- ಕೊಚ್ಚಿಯಲ್ಲಿ ಕೊಂಕಣಿ ಭಾಷಾ ಪ್ರಚಾರ ಸಭೆ 31 – 12 – 1966

ಕೊಂಕಣಿಗರ ವಿವಾಹಗಳಲ್ಲಿ ಜಾನಪದ

● ಡಾ. ಜ್ಯೋತ್ಸ್ನ ಕಾಮತ್
110, ಶಶಿಕಿರಣ್, 18ನೆಯ ಕ್ರಾಸ್, ಮಲ್ಲೇಶರಂ. ಬೆಂಗಳೂರು- 560 055

ತಮ್ಮ ಏಕಮೇವ ಪುತ್ರಿಯ ವಿವಾಹವನ್ನು ಮುಂಬಯಿಯಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿಸಲಿರುವದರಿಂದ ಖಂಡಿತವಾಗಿ ಬರಲೇಬೇಕು ಎಂದು ಸೋದರಮಾವ ಆಗ್ರಹ ಮಾಡಿದ್ದರಿಂದಲೂ, ಇತ್ತೀಚೆಗೆ ನಮ್ಮವರ ಯಾವ ಮದುವೆಯಲ್ಲೂ ಪಾಲುಗೊಳ್ಳ ಲಾಗದ್ದರಿಂದಲೂ, ಹತ್ತೆಂಟು ಕೆಲಸಗಳನ್ನು ಬದಿಯಲ್ಲಿಟ್ಟು ಹೋಗಿದ್ದೆ. ವಿವಾಹದ ಎಲ್ಲ ವಿಧಿಗಳನ್ನು ಕಾಟಾಚಾರಕ್ಕೆ ಎಂಬಂತೆ ನಡೆಸುವುದನ್ನು ನೋಡಿ ಬೇಜಾರಾಯಿತು. ಅನ್ಯಮನಸ್ಕಳಾಗಿ ಕುಳಿತಾಗ ಮನಸ್ಸು ತುಂಬ ಹಿಂದೆ ಹೋಗಿ ಕೃಷ್ಣಾಬಾಯಿಯ ಮದುವೆಯ ಸಂಭ್ರಮವನ್ನು ಮೆಲುಕು ಹಾಕಲಾರಂಭಿಸಿತು. ಅವಳ ಮದುವೆಯಲ್ಲಿ ಎಲ್ಲವನ್ನೂ ಶಾಸ್ತ್ರೋಕ್ತವಾಗಿ ನಡೆಸಲು, ಕಾಶಿಯಲ್ಲಿ ವೇದೋಪನಿಷತ್ತುಗಳನ್ನು ಕ್ರಮವಾಗಿ ಅಭ್ಯಸಿಸಿದ ಪಾಂಡುರಂಗ ಭಟ್ಟರು ಟೊಂಕಕಟ್ಟಿ ನಿಂತಿದ್ದರು. ಈ ನಗರದ ಪುರೋಹಿತರಿಗೋ ಸಂಸ್ಕೃತ ಪದಗಳ ಸರಿಯಾದ ಉಚ್ಚಾರವೂ ತಿಳಿಯದು. ಮೊಪೆಡ್ ಓಡಿಸಿ ಬಂದು, ಸತ್ಯನಾರಾಯಣ ಪೂಜೆ, ಶ್ರಾದ್ಧ, ಮುಂಜಿ, ಮದುವೆಗಳನ್ನೆಲ್ಲ ಕಾಲು, ಅರ್ಧಗಂಟೆಯಲ್ಲಿ ಮುಗಿಸಿ ಬಿಡುವ ಶ್ರೋತ್ರಿಯೋತ್ತಮರು. ಹುಲ್ಲಿನ ನಳಿಕೆಯಿಂದ ಬಾಟ್ಲಿಯಲ್ಲಿದ್ದ ತಂಪು ಪಾನೀಯ ಹೀರಿದ್ದಾಯಿತು. ಧಾರೆಯ ಮೊದಲೇ ಬಂದವರೆಲ್ಲ ಅವಸರದಿಂದ ಭೋಜನಶಾಲೆಗೆ ಹೊರಟರು. ಸ್ಥಿತಪ್ರಜ್ಞಳಂತೆ ಕುಳಿತವಳನ್ನು, ಮಾವನ ಮಗಳು ಬಂದು, 'ಮದುವೆಯ ಊಟಕ್ಕೆ ಈಗಲೇ ಪಾಳಿ ಹಚ್ಚದಿದ್ದರೆ, ಕೊನೆಯ ಪಂಕ್ತಿಯಲ್ಲಿಯೂ ನಿನ್ನ ಸರದಿ ಹತ್ತಲಿಕ್ಕಿಲ್ಲ, ಕ್ಯೂ ಹಚ್ಚು...' ಎಂದು ಎಚ್ಚರಿಸಿದಳು. ಸಹಪಾಠಿಯ ವಿವಾಹದ ನೆನಪುಗಳೇ ನಾಲ್ಕೂ ಕಡೆಯಿಂದ ಬಂದು ಮುತ್ತಿಕೊಂಡದ್ದರಿಂದ ಮೈಮರೆತೆ...

ಗೋಕರ್ಣದ ಭದ್ರಕಾಳಿ ಶಾಲೆಯ ವಿದ್ಯಾರ್ಥಿನಿ ಇದ್ದಾಗಲೇ ಗೆಳತಿ ಕೃಷ್ಣಾಬಾಯಿಯನ್ನು ನೋಡಲು ವರ ಬರಲಿದ್ದಾನೆಂದು ವಾರ್ತೆಯೇ ಗೆಳತಿಯರಿಗೆಲ್ಲ ಹೆಚ್ಚಿನ ರೋಮಾಂಚನ ನೀಡಿತ್ತು. ಹೆಸರಿನಂತೆ ಮೈ ಬಣ್ಣ ಹೊಂದಿದ್ದ ವಧು, ಗೌರವರ್ಣದ ಮೈತ್ರಿಣಿಯರಿಗೆ ಯಾರಿಗೂ ಮನೆಯ ಹತ್ತಿರ ಸುಳಿಯದಂತೆ ಬಿನ್ನವಿಸಿಕೊಂಡಿದ್ದಳು. ನಿಶ್ಚಯ ತಾಂಬೂಲವಾಯಿತೆಂದು ತಿಳಿದರೂ ಚುಡಾಯಿಸಲು ಮದುವೆಗಳು ಸಿಕ್ಕಿರಲಿಲ್ಲ. ಕೊನೆಗೆ ಮಾಸ್ ಪರೀಕ್ಷೆಗಾಗಿ ವಧು ಪ್ರತ್ಯಕ್ಷಳಾದಳು. ವರ್ಗದ ಗುರುಗಳೇ ಭಾವೀ ಗಂಡನ ಹೆಸರು ವಿಚಾರಿಸಿದಾಗ, ಹಾಡಿನ ರೂಪದಲ್ಲಿಯೇ ಹೇಳಿದ್ದಳು

ಶಾಳೆ ಸುತ್ತ ಆಸಾ, ಸುಂದರ ಫುಲಬಾಗ
ಮೆಗೆಲ್ ಹೊರ್ಕೈತಾಲೆನಾವ ಮೋಹನ ಶಾನಭಾಗ

ವಿಶ್ರಾಂತಿಯ ವೇಳೆಯಲ್ಲಿ ನಮಗಾಗಿಯೇ ಪ್ರತ್ಯೇಕವಾಗಿ ಪತಿಯ ಹೆಸರು ಹೇಳಬೇಕು, ಎಂದು ಒತ್ತಾಯಿಸಿದಾಗ ಮೊದಲೇ ಯೋಚಿಸಿ ಇಟ್ಟಂತೆ ಥಟ್ಟನೆ ಹೇಳಿದ್ದಳು.

ಬಲಿಚಕ್ರವರ್ತಿಕ ಸಂಪಾರ ಕೆಲ್ಲೆಲೊ ವಾಮನು
ಮಗೆಲ್ ಬರ್ಶಿ ಸಂಸಾರ ಕರ್ತಲೊ ಮೋಹನು.

ವಾರದನಂತರ ಹೂ ಮುಡಿಸುವುದಕ್ಕಾಗಿ ಗಂಡನ ಮನೆಯ ಹೆಂಗಳೆಯರ ತಂಡ ಬಂದಾಗ, ಏರ್ಪಟ್ಟ ವಿಶೇಷ ಊಟದಲ್ಲಿ ಪಾಲುಗೊಳ್ಳುವಂತೆ ನಮಗೂ ಆಮಂತ್ರಣವಿತ್ತು. ಮಧುಮಗಳಿಗೆ, ಜರಿ ಬಣ್ಣದ ನೂಲು ಸೇರಿಸಿ ಕಟ್ಟಿದ ಮಲ್ಲಿಗೆ, ಜಾಜಿ, ಕನಕಾಂಬರ ದಂಡೆಗಳನ್ನು ಮುಡಿಸಿ, ಹೊಳೆಯುವ ಪವನದ ಸರವನ್ನು ಕೊರಳಿಗೆ ಹಾಕಿ, ರೇಶ್ಮೆ ಸೀರೆ ಉಡಿ ತುಂಬುತ್ತಿದ್ದಂತೆ, ನೆರೆದ ಮುತ್ತೈದೆಯರು ಕೊಂಕಣಿ ವೋವಿಗಳನ್ನು ವಿವಿಧ ಸನ್ನಿವೇಶಗಳಿಗೆ ಸರಿ ಹೊಂದುವಂತೆ ರಚಿಸಿ ಹಾಡಲಾರಂಭಿಸಿದರು.

ಹಿರಿಯರಿಗೆ ವೋವಿ ಹೇಳಲು ವಿನಂತಿಸಿದ್ದು ವೋವಿ ಮೂಲಕವೇ ಎಂದು ಮೋಜೆನಿಸಿತು:

ಸಾಂಗೆ ಭಿತ್ತರಿಸಾಂಗ, ಮಶಿಂಗಾಚಿ ಸಾಂಗ
ಮ್ಹಾಲಗಡೆ ಏಸಕ್ಕಾ, ಬರಿಬರಿ ವೋವಿ ಸಾಂಗ

ಬಿನ್ನಹ ಮನ್ನಿಸಿದ ಏಸಕ್ಕ, ಈ ವಿವಾಹದ ಬಗ್ಗೆ ತಮಗೆ ಉಂಟಾಗಿದ್ದ ಕಾತರವನ್ನು ವಿವರಿಸಿದಳು:

ಲಗ್ನಾ ಕಾರಣ ವ್ಹಾಣು ಇತ್ಲೆ ದಿವಸ ಗೆಲೆ
ಹೊರ್ಕೈತಾವಾಟಪಳೊನು ಆಮಗೆಲೆ ದೊಳೆ ಭಾಗಲೆ

ನಿಶ್ಚಯ ತಾಂಬೂಲಕ್ಕೆ ವಿಳಂಬವಾದದ್ದಕ್ಕೆ ಕಾರಣವನ್ನು ಭಾವೀ ಅತ್ತೆ ಸೂಚಿಸಿದಳು:

ವಾಡ್ಡಿಲೆ ಮಗ್ಗೆ ವಾಲ್ಲೇರಿ ಸರಸರತಾ
ವರದಕ್ಷಿಣೆ ಕಾಡ್ಚಾಕ ದಾಮ್ಮಾಮ್ ಥರಥರತಾ

ಆದರೆ ವಧುವಿನ ತಾಯಿ ಪತಿಯ ನೆರವಿಗೆ ಧಾವಿಸಿ ಮದುವೆಗೆ ವಿಳಂಬ ತಮಗೆ ಏಕಮಾತ್ರ ಪುತ್ರಿಯಿದ್ದದ್ದು, ಎಂಬ ನೆಪ ತೋರಿದಳು

ಏಕ ಏಕಿ ಧುವ ವ್ಹಾಣು ಚಲ್ಯಾವಾರಿ ಹೋಡಕೆಲೆ
ಸೋಣು ವಿರ್ಚಿಕಶಿ, ವ್ಹಾಣುಮನಸಾನ ಜಾಲೆ

ಈ ವೋವಿಗಳ ಸರಸ ಯುದ್ಧವನ್ನು ಏಕ ಚಿತ್ತದಿಂದ ಆಲಿಸುತ್ತಿದ್ದ ನನ್ನನ್ನು ನೋಡಿದ ಗುಲ್ಲಕ್ಕಾ, "ಈ ಗುಲಾಬೀ ಹೂ ಯಾವುದು? ಒಳ್ಳೆಯ ವರ ಸೂಚಿಸಲೇ?" ಎಂದಾಗ ಮೆಟ್ಟಿ ಬಿದ್ದೆ. ಇದೆಲ್ಲಿಯ ಗ್ರಹಚಾರ ಗಂಟುಬಿತ್ತು? ಎಂದು ಗಾಬರಿಗೊಂಡು, ವರರನ್ನೂ ನಾಚಿಸುವಷ್ಟು ತುಂಬ ಕಲಿಯಬೇಕೆಂದಿರುವೆನು, ಎಂದು ವೋವಿಯ ರೂಪದಲ್ಲಿಯೇ ವಿವರಿಸಿ ಅಲ್ಲಿಂದ ಕಂಬಿಕಿತ್ತಿದ್ದೆ:

ಹಾಂವೆ ದಾರಲ್ಯಾವಾರಿ ಶಿಕ್ಕಾ ಮಸ್ತ ಮಗ್ಗಿ
ಮಾಕ್ಕಾ ನಾಕ್ಕಾ ಕಾಂಯಿ ಲಗ್ನ ಇತ್ಲೆ ಬೆಗ್ಗಿ

ಸೀರೆ, ಬಂಗಾರ, ಆಮಂತ್ರಣ, ಆತಿಥ್ಯ, ಹರಟೆ, ನಗೆಚಾಟಿಕೆ, ವೋವ್ಯೋ, ಹುಮ್ಮಾಣೆಗಳ ನಡುವೆ ಕೃಷ್ಣಾಬಾಯಿಗೆ ವಿದ್ಯಾಭ್ಯಾಸ ರುಚಿಸದಿದ್ದರಿಂದ ಶಾಲೆಗೆ ತಿಲಾಂಜಲಿ ಕೊಟ್ಟಳು. ಇದರಿಂದ ಮದುವೆ ಮನೆಯ ಸ್ವಾರಸ್ಯದ ಘಟನೆಗಳು ನಮ್ಮ ಪಾಲಿಗೆ ಇಲ್ಲವಾಗಲಾರಂಭಿಸಿದ್ದರಿಂದ ನಾವೇ ಅವಳ ಮನೆಗೆ ದಾಳಿ ಇಡಲಾರಂಭಿಸಿದೆವು.

ಕೃಷ್ಣಾಬಾಯಿ ತಂದೆಯವರ ಗದ್ದೆಗಳಿಂದ ಬಂದ ಬತ್ತವನ್ನು ಆರ್ದ್ರತೆಯಿಂದ ಕೆಡಬಾರದೆಂದು ಜಗುಲಿಯ ಮೇಲೆ ದಾಸ್ತಾನು ಮಾಡಿದ್ದರು. ಮದುವೆಗೆ ಬೇಕಾಗುವ ಅಕ್ಕಿಯನ್ನು ಸಿದ್ಧಮಾಡಲು ಕಾರ್ಲೆ ಹೆಂಗಳೆಯರನ್ನು ನೇಮಿಸಲಾಗಿತ್ತು. ಅವರು ವೀಳ್ಯ ಜಗಿದು ತುಟಿ ಕೆಂಪಗೆ ಮಾಡಿಕೊಂಡು, ಬತ್ತವನ್ನು ಮಣ್ಣಿನ ಹಂಡೆಯಲ್ಲಿ ಕುದಿಸಿ, ಒಣಗಿಸಿ ಒನಕೆಯಿಂದ ಕುಟ್ಟುತ್ತಿದ್ದರು. ಮೂವರು ಕಾರ್ಲೆಯರು (ಖಾರ್ವಿ ಹೆಂಗಸರು) ಕಾಲಿನಿಂದ ಬತ್ತ ಮುಂದೆ ತೂರುತ್ತ, ಕೈಯಲ್ಲಿ ಒನಕೆ ಹಿಡಿದು ಕುಟ್ಟುತ್ತ ಬಾಯಲ್ಲಿ ಕೊಂಕಣಿ ಹಾಡು ಜೊತೆಯಲ್ಲಿ ಹಾಡುತ್ತಿದ್ದರು.:

ಹೆಂ, ಹೆಂ, ಹೆತ್ತಾ। ಭಾತ ತಾಂದುಳ ಜಾತ್ತಾ
ಸಾನ ಆಮ್ಕಾರ್ ಘೋವ್ ಜಿವಣಾ ಎತ್ತಾ
ಹೆಂ, ತೆಂ, ಹೆತ್ತಾ ....

ಇವರ ಹಾಡು ಕೇಳಿಸಿಕೊಂಡವನಂತೆ, ಮೋಹನ ಶಾನಭಾಗನು, ಗೋಕರ್ಣ ಮಠದಲ್ಲಿ ಏನೋ ಕೆಲಸ ಇತ್ತೆಂದು ಕುಂಟು ನೆಪ ಹೇಳಿ, ಬಂದಿಳಿದನು. ಸಡಗರದಿಂದ ಭಾವೀ ಅತ್ತೆ, ಮಗಳು ಪಾಕ ವಿದ್ಯೆಯಲ್ಲಿ ಪಾರಂಗತೆ ಎಂದು ಅಳಿಯನಿಗೆ ಮನವರಿಕೆ ಮಾಡಿಕೊಡಲು ಒಲೆಯ ಮೇಲೆ ಕುದಿಯುತ್ತಿದ್ದ ಬೇಳೆಯಲ್ಲಿ ಸೌಟು ಆಡಿಸಲು ಸೂಚಿಸಿದಳು. ಯಾವ ಕೆಲಸವನ್ನೂ ಮಾಡಿ ಅರಿಯದ ಮಗಳು ಬಲಗೈ ಮೇಲೆ ಎಸರು ಸಿಡಿದು, ಕೊಂಚ ಗುಳ್ಳೆ ತರಿಸಿಕೊಂಡಳು. ತಂದೆ, ತಾಯಿ, ತಿಂಡಿ ತಿನ್ನುತ್ತಿದ್ದ ಅಳಿಯ ಎಲ್ಲರೂ ಹೌಹಾರಿದರು. ತಾಯಿ ಕೆಂಪು ದಾಸವಾಳದ ಪಕಳೆಯನ್ನು ಸುಟ್ಟಲ್ಲಿ ಹಚ್ಚಿ ಕೋಣೆಯಲ್ಲಿ ವಿಶ್ರಮಿಸಲು ಸೂಚಿಸಿದಳು. ಸಮಯ ಕಾದು ಮೋಹನನು ಕೃಷ್ಣಾಬಾಯಿಯ ಬಳಿ ಬಂದು ತಲೆ ನೇವರಿಸಿದಾಗ, ಅವಳಿಗೆ ರೋಮಾಂಚನವಾಯಿತಂತೆ! ಸುಟ್ಟಗಾಯಕ್ಕೆ ಗಾಳಿ ಹಾಕುತ್ತ ಸುಖದುಃಖಗಳಲ್ಲಿ ತಾವು ಜೊತೆಯಾಗಿರಬೇಕೆಂದು ಸೂಚಿಸಿದನಂತೆ. ಕುತೂಹಲದ ಹುಡುಗರು, ಹಣಿಕೆ ಹಾಕಿ ಇವರಿಬ್ಬರನ್ನು ನೋಡಿ ಹೋದರು. ಅದೇ ವಿಚಾರವನ್ನು ಮೋಹನ ವೋವಿಯಲ್ಲಿ ತಂದನಂತೆ.

ಚಿರಡುಂವ ಪೋಲಿ ಭ್ಯಾರ ಆಗ್ಸುನ ಪೊಳೊವ್ನುಗೆಲಿ !
ಸಂಸಾರಾ ಸುಖದುಃಖಾಂತ, ಕೃಷ್ಣಿ,ತೂ ಮೆಗೆಲಿ

ಮದುವೆಗೆ ಇನ್ನೂ ಎರಡು ವಾರಗಳಿರುವಾಗಲೇ ನೆಂಟರು, ಆಪ್ತೇಷ್ಟರು, ಸರ್ವಕುಟುಂಬಗಳೊಂದಿಗೆ ನಾವೆಗಳಲ್ಲಿ, ಜೋಡಿ ಎತ್ತಿನ ಗಾಡಿಯಲ್ಲಿ ಪಯಣ ಕೈಕೊಂಡು ಬಂದಿಳಿದರು. ಅವರೆಲ್ಲ ತಂತಮ್ಮ ಕೆಲಸಗಳನ್ನು ತಾವೇ ಮಾಡಿ ಕೊಳ್ಳುವದಲ್ಲದೇ ಸಾಮೂಹಿಕವಾಗಿ ಮದುವೆಯ ಸಿದ್ಧತೆಗೆ ಸಹಾಯ ಮಾಡುತ್ತಿದ್ದುದು ಅಂದಿನವರ ವೈಶಿಷ್ಟ್ಯವಾಗಿತ್ತು. ಅಂಗಳದಲ್ಲಿ ತೆಂಗಿನ ಸೋಗೆಗಳ ಬಲು ದೊಡ್ಡ ಚಪ್ಪರ ಹಾಕಿದ್ದರು. ಒಂದು ಮೂಲೆಯಲ್ಲಿ ಗುಂಡುಗಲ್ಲುಗಳ ದೊಡ್ಡ ದೊಡ್ಡ ಒಲೆ, (ರಶ್ಯಾರಾಂದಣಿ)ಗಳನ್ನು ಹೂಡಿದ್ದರು. ಅಡಿಗೆಯ ಸರ್ವ ಜವಾಬ್ದಾರಿಯನ್ನೂ ಶೀನ ಮಾಮನಿಗೆ ವಹಿಸಲಾಗಿತ್ತು. ಆದರೆ ಸುಖ ನಿದ್ರೆಯಲ್ಲಿ ಹೆಚ್ಚು ವಿಶ್ವಾಸವಿಟ್ಟು ಅದಕ್ಕಾಗಿ ಸದಾ ಚಾಪೆ ಹುಡುಕುವ ಅವನ ಚಪಲವನ್ನು ಖಂಡಿಸಿ ಅಕ್ಷೆ (ಅಘನಾಶಿನಿ)ಯ ಚಂಪಕ್ಕ, ಹಾಡಿನ ಛೂಬಾಣ ಬಿಟ್ಟಿದ್ದಳು:

ಕಾಳೆ ಪಿಟ್ಟ ಜಾನವೆ, ಗೋಪಿಚಂದನಾಚೆ ನಾಮು
ನಿಧ್ದಾಕ ಮಾಂದ್ರಿ ಸದಾ ಸೊತ್ತಾ, ಶೀನ ಮಾಮು!

ಎಲ್ಲ ತರದ ಚುಚ್ಚು ಹಾಡುಗಳನ್ನು ಕೇಳಿ ಬೆಳೆದ ಅಡಿಗೆ ಭಟ್ಟನು, ತಾನೂ ಹಿಂಜರಿಯದೇ, ಚಂಪಕ್ಕ ಎಂಥ ಜಗಳಗಂಟಿ ! ಎಂಬರ್ಥ ಬರುವಂತೆ ಹಾಡಿದ:

ರಾಂಚಾಕ ದಿಲ್ಯಾಹೀ ಆಜ್ಜಾ ಕಾಲಚೇಪಚಾಂಡಿ
ಅಕ್ಷೆಚೀ ಚಂಪಕ್ಕಾ ಆಸ್ಸ ಮಹಾಲಚಾಂಡಿ !

ಈ ವಾಗ್ಯುದ್ಧ ವಿಕೋಪಕ್ಕೆ ಹೋಗಬಾರದೆಂದು ಬರ್ಗಿಯ ಯಮುನಕ್ಕ ಹುಮ್ಮಾಣೆ (ಒಗಟ) ಹಾಕಲು ಪ್ರಾರಂಭಿಸಿದಳು:

ಸರ್ ಸರ್ ಕರ್ತಾಸರ್ಪನಯಿ, ಗಡ್ ಗಡ್ ಕರ್ತಾ ಘಂಟೋನಯಿ,
ಗಳ್ಯಾಂತು ಜಾನವೆ ಬ್ರಾಹ್ಮಣ ನಯಿ, ಹೆಂಸಾಂಗಿಲೆ ಸೀತೆಸಮಾಸ

ಒಬ್ಬಳು ಮೊಸರು ಕಡೆಯುವ ಕಡೆಗೋಲು ಎಂದಳು. ಇನ್ನೊಬ್ಬಳು 'ನೂಲುವರಾಟೆ' ಎಂದು ಉತ್ತರಿಸಿದಳು. ಯಮುನಕ್ಕಳೇ 'ಬಾವಿಯ ಗಡಗಡೆ' ಎಂದು ಹೇಳಿದಾಗ ಮದುಮಗಳು ತಾನು ಅದನ್ನೇ ಹೇಳಬೇಕೆಂದಿದ್ದೆ, ಎಂದಳು. "ನಿನಗೆ ಮೋಹನ ಮುರಳಿ ಬಿಟ್ಟರೆ ಏನು ಗೊತ್ತುಂಟು?" ಎಂದು ವಚ್ಚಿ, ಕೊಂಕು ನುಡಿದಾಗ ಎಲ್ಲರೂ ಗಹಗಹಿಸಿ ನಕ್ಕರು.

ಶೀನಮಾಮನ ಮೇಲ್ವಿಚಾರಣೆಯಲ್ಲಿ ತಿಂಡಿ ಮಾಡಲು ಪ್ರಾರಂಭಿಸಿದರು. ಮಾಂಡೆ, (ಮಂಡಿಗೆ), ನೆವರಿ (ಕರ್ಚಿಕಾಯಿ), ಸಾರಿ (ಬಾಲೂಷಾ), ಖಿಡಿ (ಬರ್ಫಿ), ಗುಳಿ (ರವೆಲಾಡು), ಬೂಂದಿಲಾಡು, ಸೇವು, ಚೂಡಾ, ಮುಂತಾದವನ್ನು ಸಿದ್ಧಮಾಡಿ ದೊಡ್ಡ ದೊಡ್ಡ ಪೀಪೆಗಳಲ್ಲಿ ತುಂಬಿಡಲಾರಂಭಿಸಿದರು. ಸೀಮಂತ ಪೂಜೆಗೆಂದು ಬೃಹದಾಕಾರದ ಲಾಡು, ಚಕ್ಕುಲಿ, ಮಾಂಡೆಗಳನ್ನು ಮದುಮಗಳಿಂದಲೇ ಮಾಡಿಸಿದರು. ಚಿಕ್ಕ ಚಿಕ್ಕ ಹತ್ತು ಕರಜಿಕಾಯಿ ಹೊತ್ತ ದೊಡ್ಡ ದೊಡ್ಡ ಕರಜಿ ಕಾಯಿಯನ್ನು ಕರಿದು ಬರ್ಗಿಯ ಗಂಗಕ್ಕ ಕೈಗೆತ್ತಿಕೊಂಡು "ಇವಳು ಕೃಷ್ಣಾಬಾಯಿ, ಮುಂದೆ ಹತ್ತು ಮಕ್ಕಳ ತಾಯಿ!" ಎಂದಾಗ ಎಲ್ಲರೂ ನಕ್ಕದ್ದೇ.

ಶಿವ ಭಂಡಾರಿಯ ಪಂಚ ವಾದ್ಯಗಳು ಮೊಳಗುತ್ತಿದ್ದಾಗ, ಗರ್ನಾಲುಗಳು ಸಿಡಿಯುತ್ತಿದ್ದಾಗ ನಾಲ್ಕಾಳು ಹೊತ್ತ ಮೇಣೆಯಲ್ಲಿ ಮೋಹನನು ರಾಜ ಠೀವಿಯಿಂದ ಬಂದು ಇಳಿದನು. ಸುಮಂಗಲೆಯರು ಕುಂಕುಮದ ನೀರಿನಿಂದ ದೃಷ್ಟಿ ಪರಿಹಾರ ಮಾಡಿ ಹಾಡಲಾರಂಭಿಸಿದರು:

ಧನಧಾನ್ಯ ಮಸ್ತ, ಜಾಲ್ಯಾರ್ ಬರಿ ವೃಷ್ಟಿ
ಲಾಗನಯ ಹೊರ್ರೈತಾಕ ಆಯಿಲ್ ಗೆಲ್ಯಾಲ್ ದೃಷ್ಟಿ

ತನ್ನ ಸೋದರ ಮಾವ ಎಷ್ಟೊಂದು ಸುಂದರನಾಗಿ ಕಾಣುತ್ತಾನೆಂದು ಮೋಹಿನಿ ಬಾಳಗಿ ವೋವಿಯ ರೂಪದಲ್ಲಿ ಹೇಳಿದಳು:

ಹೊನ್ನಾವರ ತೆರಾಚೇರಿ ಶೊಭಿತಾ ಸೀತಾರಾಮು
ಹೊರ್ರೈತ ಚಾವ್ನ ಶೊಭಿತಾ ಆಮಗೆಲ್ ಮೋಹನ ಮಾಮು

ವರನ ಕಡೆಯ ಪುರೋಹಿತರಿಗೆ ಸಿಕ್ಕಿದ್ದೆಲ್ಲ ದೋಚಿಕೊಳ್ಳುವ ಹವ್ಯಾಸ. ಇದನ್ನು ಖಂಡಿಸಿ ನೀಲಕೋಡ ಏಸಕ್ಕಳಿಗೆ ಹಾಡಿನ ಏಟು ಹಾಕದೇ ಇರಲಾಗಲಿಲ್ಲ.

ಬಾಯುಲೆಕ ಸದಾಯ ಜಾಯ್ ಘೊವಾಲಿ ರಕ್ಷಣಾ
ಆಪಾಭಟ್ಟಾಕ್ ಉಟ್ಲಾರ್ ಬಸಲ್ಯಾರ್ ಜಾಯಿ ದಕ್ಷಿಣಾ !

ಇದರಿಂದ ಭಟ್ಟರು ನೊಂದುಕೊಳ್ಳಬಾರದೆಂದು ಯಜಮಾನತಿ; ಅವರಿಗೆ ಭರ್ಜರಿಯಾಗಿ ತಿಂಡಿ – ತೀರ್ಥಗಳನ್ನು ಒದಗಿಸಿದ್ದರಿಂದ ಅವುಗಳಲ್ಲಿಯೇ ಮೈಮರೆಯುವಂತೆ ಆಯಿತು.

ವಿವಾಹದ ದಿನ, ನಸುಕು ಹರಿಯುವ ಮೊದಲೇ ಮದುಮಗಳಿಗೆ ಅಭ್ಯಂಜನ ಸ್ನಾನ ಮಾಡಿಸಿದರು. ಆದಾಗಲೇ ಪ್ರಾರಂಭವಾಗಿದ್ದ ಮಂಗಳ ವಾದ್ಯ, ಊರವರಿಗೆಲ್ಲ ಆಮಂತ್ರಣ ನೀಡಿತು. ಮಲ್ಲಿಗೆ, ಜಾಜಿ, ಸೇವಂತಿಗೆ, ಕನಕಾಂಬರ ದಂಡೆಗಳನ್ನು ಮುಡಿದು, ಆಕರ್ಷಕ ಬಣ್ಣಗಳ ಕಲಾಪತ್ತಿನ ರೇಶ್ಮೆ ಸೀರೆಗಳನ್ನು ಉಟ್ಟು, ಕಿವಿ, ಕೊರಳು, ತೋಳು, ಕೈಗಳಿಗೆ ರಾಶಿ ಆಭರಣಗಳನ್ನು ತೊಟ್ಟು ಬರುತ್ತಿದ್ದ ಲಲನೆಯರನ್ನು ನೋಡುತ್ತಿದ್ದಂತೆ ಅವರೆಲ್ಲ ದೇವಲೋಕದ ಅಪ್ಸರೆಯರಂತೆ ಕಂಡರು. ಆಗಂತುಕರೆಲ್ಲ ವಿವಿಧ ಕೆಲಸಗಳನ್ನು ಹಂಚಿಕೊಂಡು ಕಾರ್ಯೋನ್ಮುಖರಾದರು. ಕಲಾತ್ಮಕವಾಗಿ ರಂಗೋಲಿ ಹಾಕಿ, ಅದರ ನಡುವೆ ಅಲಂಕೃತವಾದ ಬೀಸುವ ಕಲ್ಲನ್ನು ಸ್ಥಾಪಿಸಿ ಉದ್ದು ಬೀಸುತ್ತ ಮಂಗಲ ಕಾರ್ಯಕ್ಕೆ ನಾಂದಿಯನ್ನು ಹಾಡಲಾರಂಭಿಸಿದರು:

ದಾಂತೆ ಮಾಂಡೆಯಾ, ಉಡಿದು ಭರದಯಾ
ದೇವಾನ ಕರಕಾದಯಾ ಕಾರಣೂಕ್

ಯಾವ ಅಡೆತಡೆಗಳಿಲ್ಲದೇ ಸಮಾರಂಭ ಸಾಂಗವಾಗಿ ನಡೆಯಲೆಂದು ಗಣಪತಿ ದೇವನ ನೆರವನ್ನು ಕೋರಿದರು.

ನವೆ ಘರಾಂತ ಜಾವಂಚಿ ಪೈಲೇಚಿ ಲಗ್ನ
ಗಣಪತಿ ದೇವಾ, ದೂರಕರಿ ಸರ್ವ ವಿಘ್ನ

ಒಂದೊಂದೇ ವಿಧಿ ಪ್ರಾರಂಭವಾದಾಗ. ಹೆಂಗಳೆಯರೆಲ್ಲ "ವೋವ್ಯೊ" ವೋಣಿಸಿ ವೋಣಿಸಿ ಹಾಡುವ ಸ್ಪರ್ಧೆಯೂ ತುರುಸಿನದಾಯಿತು. ಯಜಮಾನಿಯ ಬೆಲೆಬಾಳುವ ಸೀರೆಯಿಂದ ಹೊಟ್ಟೆಕಿಚ್ಚು ಪಟ್ಟ ಪಾರ್ವತಕ್ಕಳು ಚುಚ್ಚುವಂತೆ ಹಾಡಿದಳು:

ಚಾರಶಾ ಕಾಪಡ ನಾಕ್ ವ್ಹಾಣು ಪಾಂಯಶಾಚಿ ನೆಸಲಾ
ಹೊರೈತಾಲಿ ಆಮ್ಮಾ ರಾಣೀ ಐಟೀನ್ ಬಸಲಾ

ಎಲ್ಲ ಚಟುವಟಿಕೆಗಳತ್ತಲೂ ಲಕ್ಷ ಪೂರೈಸುತ್ತಿದ್ದ ಯಜಮಾನನಿಗೂ ವೋವಿಯ ಉಡುಗೊರೆ ಸಂದಿತು:

ರಶ್ಯಾಚಾ ರಾನ್ನಿರಿ ಭಾಚ್ಚಾ ಘೂಲಾ ,ವೊಳೊ
ಚಾರಿ ದಿಕಾನ ದೊಳೊ ಹೊರ್ಯೆತಾ ಬಾಪಸುಕ

ವರದಕ್ಷಿಣೆಯನ್ನು ತುಸು ಹೆಚ್ಚಾಗಿಯೇ ಲಪಟಾಯಿಸಿದ್ದಾರೆ, ಎಂದು ಗಾಳಿ ಸುದ್ದಿ ಕೇಳಿದ ಮುಂಗುವೆಯ ಗೌರಕ್ಕ ಹಾಡಿದಳು:

ಪಟ್ಟೆ ಭಿತ್ತರಿ ಪಟ್ಟೆ, ಜಾಯಜಾ ಕಳ್ಯಾ ಪಟ್ಟೆ
ವರದಕ್ಷಿಣಾ ಘೆವಚಾಕಘಟ್ಟೆ ಶೆಣ್ಯೆ ಮಾಮು.

ಸಾಲಂಕೃತಳಾಗಿ ಸುಂದರಿಯಾಗಿ ತೋರುತ್ತಿದ್ದ ಮದುಮಗಳನ್ನು ಸೋದರ ಮಾವ ಮಂಟಪಕ್ಕೆ ಕರೆತಂದಾಗಿ ವೋವಿ ಹೊಮ್ಮಿತು:

ರ್ಝುರೆಚಿ ಕಾಪಡ ದೆಗೆನ ಬಾರೀಕ
ಕೃಷ್ಣಾಬಾಯಿ ಮಳ್ಯಾರಿ, ರೂಪ್ಯಾನ ಮಾಣಿಕ

ಚೆನ್ನಾಗಿ ಪರೀಕ್ಷಿಸಿ ಮಾಡಿಕೊಂಡ ಹುಡುಗಿ ಅದೆಷ್ಟು ಉತ್ತಮ ಸೊಸೆಯಾಗಬಲ್ಲಳು, ಎಂದು ಅತ್ತೆಗೆ ತಿಳಿಹೇಳುವ ವೋವಿ:

ಪಾನ್ನಾರಿವಾಡಿಲ್ ಪೆಜ, ಜವಚಾ ಗೆಲ್ಯಾರಿ ಹೂನ್
ಪದ್ಮಾವತೀನ ಹಾಡಚಿ, ಅತ್ತಿಚೀ ಸೂನ್

ವಧುವಿಗೆ ತಂದ ಬಂಗಾರದ ಸೊಂಟಪಟ್ಟಿ (ಡಾಬು) ವಿವರ ತಿಳಿಸಲು ಸಾಲೆರಡು.

ದಾವ್ ಮಾಮಾನ ದಕ್ಷಿಣೆಕ ದಿಂವಚೊಪೈಸೋ ಖೊಟಾ
ಮೂರ್ತಾ ತಳೇರ್ ಮಾತ್ರಹಾಡಚೊ ಭಾಂಗ್ರಾಚೊ ಪಾಟ್ಟೊ

ಮದುಮಗನ ಪಾಲಿಗೆ ಬಂದ ಆಭರಣವೂ ಚಿಕ್ಕದೇನಲ್ಲ:

ಸೊಲ್ಲಾ ಭಿತರಿ ಸೊಲ ವಟಂಬಾಚಿ ಸೊಲ
ಮೊಹನಾಕ ದಿಲಾ ಪಾಂಚಪವನಾಚಿ ಗೊಲ

ಅಳಿಯನ ಆಕಳಿನಂಥ ಸ್ವಭಾವವನ್ನು ವಿವರಿಸುತ್ತ :

ಕಟ್ಯಾಕ ಪಿಂಪಳಾ ರುಕ್ಕಾ, ಪಾನ್ನ ಪಾತಳ
ಹೊರ್ಯೆತ ಗುಣಾನ ಆಸಭಾರೀ ಶೀತಳ

ಇತರರಿಗೆ ಗೊತ್ತಾಗದಂತೆ ವಧು ಕಡೆಗಣ್ಣಿನಿಂದ ಗಂಡನನ್ನು ನೋಡಿ ನಕ್ಕಿದ್ದು ಮುತ್ತೈದೆಯೊಬ್ಬಳ ಕಾಕದೃಷ್ಟಿಗೆ ಗೋಚರಿಸದಿರಲಿಲ್ಲ:

ಆಚೊಲೆ ಚಿ ಫೂಲ ತಾಂಬಡೆ ತಾಂಬಡೆ ದಿಸತಾ
ಘೊವಾ, ವೊಳೊವ್ನು ಆಮಗೇಲ್ ಕೃಷ್ಣಿ ಹಾಸತಾ

ಮದುವೆಯ ಮುಹೂರ್ತ ಮುಗಿದು, ತನ್ನ ವೋವಿಗೆ ಅವಕಾಶ ಸಿಗಲಿಲ್ಲವೆಂದು ಚಡಪಡಿಸಿದ ಮಾಡಗೇರಿಯ ಶೇವಂತಕ್ಕಳಿಗೆ ದೊಡ್ಡ ಹೊಟ್ಟೆಯ ಭಟ್ಟರೇ ವೋವಿಗೆ ವಸ್ತುವಾದರು:

ಅತ್ತಿಚ್ಯಾ ಸುನೆಕ ಮಾವಾನ ಹಾಡಲಾ ತೊಡೊ
ಆಪಾ ಭಟಾಲ್ ವೊಟ, ತಾಂದಳಾಚೊ ಮುಡೊ

ಎಲ್ಲದರಲ್ಲೂ ತಲೆ ಹಾಕುತ್ತಿದ್ದ ಅಧಿಕಪ್ರಸಂಗಿ ನಾದಿನಿಯನ್ನು ಮರ್ತಕ್ಕಳು ಹಾಡಿ ಹರಸಿದಳು.:

ಆ ಮಗೆಲ್ಯಾ ನವ್ಯಾ ಮಾಡ್ಯಾರುಕಾಕ ಸುಟ್ಲಾ ಪಿಸುಂದರ
ಕೃಷ್ಣಾ ಬಾಯಿಲಿ ನಣದ ರಾಂಚ ಕುಡಿ ಧಾವಚಿ ಬೇಚುಂದ.

ಧಾರೆ ಎರೆದ ನಂತರ, ನವದಂಪತಿಗಳಿಗೆ ಆತ್ಮೀಯತೆ ಬೆಳೆಯಲೆಂದು ಹತ್ತಾರು ಚಟುವಟಿಕೆಗಳಲ್ಲಿ ತೊಡಗಿಸಿದರು. ಅವುಗಳಲ್ಲಿ ಆಪ್ತೇಷ್ಟರು ಸಕ್ರಿಯವಾಗಿ ಪಾಲುಗೊಳ್ಳುವುದರಿಂದ ಬಿಗಿಯಾದ ವಾತಾವರಣ ತಿಳಿಯಾಗಿ ಸಕಲರೂ ನಗೆಗಡಲಿನಲ್ಲಿ ತೇಲಲು ನೆರವಾಗುತ್ತದೆ. ನೀರಿನಲ್ಲಿ ಉಂಗುರ ಮುಳುಗಿಸಿ ಹುಡುಕಲು ಹೇಳಿದಾಗ, ಮದು ಮಗನು ಮೃದುವಾದ ಕರಸ್ಪರ್ಶವನ್ನು ಅನುಭವಿಸುತ್ತಿದ್ದಾಗ, ಪತ್ನಿ ಬೇಗನೆ ಉಂಗುರವನ್ನು ತನ್ನದನ್ನಾಗಿ ಮಾಡಿಕೊಂಡು ಬಿಟ್ಟಳು. ಅಡಗಿಸಿಟ್ಟ ಪತ್ನಿಯನ್ನು ಹುಡುಕುವ ತೊಂದರೆ ತೆಗೆದುಕೊಳ್ಳದೇ 'ಸೋತೆ' ಎಂದಾಗ, ನೀನೆಂಥ ಗಂಡಸು! ಎಂದು ಹೆಂಗಳೆಯರು ಚುಡಾಯಿಸದೇ ಇರುವುದಿಲ್ಲ. ಮದುಮಗಳಿಗೆ ಹಣ್ಣು, ಸಿಹಿತಿಂಡಿ ತಿನ್ನಿಸುವಾಗಲೂ ಹಾಡು ಹಾಡಿಸಿಯೇ ಬಿಡುವರು:

ಮಾಂಟವಾಕ ಬಾಂದಲಾ ಸಾಗವಾನಿ ಎಳಿ
ಖಾಗೊ ಕೃಷ್ಣಾಬಾಯ್, ಗೊಡ ಮಿಟಕಾ ಕೆಳಿ

ಉಂಡಿ ತಿನ್ನಿಸುವಾಗಲೂ ವೋವಿ ಹೇಳಿಯೇ ತೀರಬೇಕು:

ಮನ್ನಾತ್ ಆಚಾರ್ಯಾನ ಹಾತ್ತಾ ಧರ್ಲಾವಿಳಿ
ಕೃಷ್ಣಿ, ತೊಂಡಾಂತ ಘೆ, ಪ್ರೀತಿಚಿ ಗುಳಿ.

ದೇವರಿಗೆ ಮೀಸಲು ಹೊರಟಾಗ ಬಾಗಿಲು ಅಡ್ಡಗಟ್ಟಿ ನಿಂತು, ತಮ್ಮವರ ಹೆಸರು ಹೇಳಿಸುತ್ತಾರೆ. ಪತ್ನಿ ಪತಿಯ ಹೆಸರು ಹತ್ತಾರು ಬಾರಿ ಹೇಳಬೇಕು. ಹೊಸ ವೋವಿ ಹೇಳಬೇಕು:

ಬಸಚಾಕ ಘೂಲಾ ತಾಂಬ್ಡಿ ಹೋಡ ಮಣಿಯೆ್
ಮೆಗೆಲ್ ರಾಯಾಲೆ ನಾವ. ಮೋಹನ ಶೆಣೈ

ಇದಾದ ನಂತರ ಪತ್ನಿಯ ಹೆಸರನ್ನು ಪತಿಯಿಂದ ಹೊರ ತರುವುದು ಕಷ್ಟದ ಕೆಲಸವಲ್ಲ.

ಕೃಷ್ಣಾಲಿ ಭಕ್ತಿಣ, ಸಂತ ಮೀರಾಬಾಯಿ
ಮೆಗೆಲಿ ಬಾಯ್ಲ್ ಹೀ ಚಂದ ಕೃಷ್ಣಾ ಬಾಯಿ.

ಸಕಲ ಚಟುವಟಿಕೆಗಳನ್ನು ಮುಗಿಸಿ, ಕನ್ನೆಯನ್ನು ಒಪ್ಪಿಸಿ, ಅವಳು ಪತಿಗೃಹಕ್ಕೆ ಹೊರಟುನಿಂತಾಗ, ಆಗುವ ದುಃಖ ಕಳವಳಗಳಿಗೆ ಕೊನೆ ಮೊದಲಿಲ್ಲ. ಕಣ್ಣೀರು ಒರಸುತ್ತ ತಾಯಿ ಹಾಡುವಳು:

ಇತ್ಲೆ ವರ್ಸ ಹೊಡಕೆಲ್ಲೆ ಘೊವಾ ತಾಬ್ಯಾದಿಲೆ
ಧೂರ ತೂ ವತ್ತಾ ಧುವೆ, ಆಮಗೆಲೆ ಮನಸಾನ ಜಾಲೆ.

ಬಿಕ್ಕುವ ಮಗಳನ್ನು ತಬ್ಬಿಕೊಂಡು ಸಂತೈಸುವ ಧನಿಯಲ್ಲಿ

ಕುಳಾರ ಧೂರ ವ್ಹಣು ಬೇಜಾರ ಕರೂನಾಕಾ
ಘೊ ವಾಲ ಪುಣ್ಯಾನ ತುಕಾ ಸುಖ ಮೆಳ್ತಲೆ !

ಕೃಷ್ಣಾ ಬಾಯಿಯ ಮದುವೆಯಲ್ಲಿ ಆನಂದಿಸಿದಷ್ಟು ಇನ್ನಿತರ ಗೆಳತಿಯರ ವಿವಾಹದಲ್ಲಿ ಸಂತಸಪಡಲಾಗಲಿಲ್ಲ. ಇದಕ್ಕೆ ಮುಖ್ಯ ಕಾರಣ, ನಮ್ಮವರು ತಮ್ಮತನ ಬಿಟ್ಟು ಎಲ್ಲವನ್ನೂ ಯಾಂತ್ರಿಕ ವಾಗಿ ನಡೆಸಲಾರಂಭಿಸಿದ್ದು. ನಗರದವರು, ಹಾಡು, ಹಾಸ್ಯ - ವಿನೋದಗಳಿಗೆ ವೇಳೆ ಸಾಲದೆಂದರು. ಹೊಸ ಪೀಳಿಗೆಯವರು ಅದೆಲ್ಲ ಬಾದರಾಯಣನ ಕಾಲದ ರೀತಿಯೆಂದರು. ಕೆಲವರು ಇವನ್ನು ತಮ್ಮ ಅಂತಸ್ತಿಗೆ ಕುಂದೆಂದು ಬಗೆದರು. ಹಿರಿಯ ಹೆಂಗಳೆಯರು ಹಾಡಲು ಪ್ರಾರಂಭಿಸಿದಾಗ ಅವರನ್ನು ಗದರಿಸಿ ಬಾಯಿ ಮುಚ್ಚಿಸುವವರನ್ನು ಕಾಣುವಂತೆ ಆಯಿತು, ಎಷ್ಟು ಯತ್ನಿಸಿದರೂ ಕೃಷ್ಣಾ ಬಾಯಿಗೆ ದೊರೆತಂಥ ಮದುವೆಯ ಸಡಗರ ನನ್ನದಕ್ಕೆ ಮಾಡಲು ಸಾಧ್ಯವಾಗಲೇ ಇಲ್ಲ! ಆದರೆ ಇಷ್ಟೊಂದು ಕಳಪೆ ಮದುವೆ ನಪ್ಪವರು ನಡೆಸಬಹುದೆಂದು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ ಎಂದುಕೊಂಡು ಕನಸಿನ ಲೋಕದಿಂದ ಇಹ ಲೋಕಕ್ಕೆ ಇಳಿದು ಬರುತ್ತಿದ್ದಂತೆ ಯಾರೋ ಕಿವಿಯಲ್ಲಿ "ಈಗ ವೀಡಿಯೋ ತೆಗೆಯುವ ಕಾರ್ಯಕ್ರಮ ಇದೆಯಂತೆ! ಸುಂದರ ವಾಗಿ ಅಲಂಕರಿಸಿಕೊಂಡು, ಆಕರ್ಷಕ ಸೀರೆ ಉಟ್ಟುಕೊಂಡು ಬರು ವಂತೆ ಮಾಮಾ ಸೂಚಿಸಿದ್ದಾರೆ" ಎಂದು ಪಿಸುಗುಟ್ಟಿದಾಗ ಪಿತ್ತ ನೆತ್ತಿಗೇರಿತು. ಊಟ ಮಾಡಿದೆಯಾ? ಎಂದು ಕೇಳುವ ಸೌಜನ್ಯ, ಒಬ್ಬರಿಗೂ ಇಲ್ಲದಿದ್ದರೂ ಮುಖಕ್ಕೆಲ್ಲ ಬಣ್ಣ ಬಳಿದುಕೊಂಡು ಯಕ್ಷಗಾನ ಸ್ತ್ರೀ ವೇಷ ಧಾರಿಣಿಯಂತೆ ಬರಬೇಕಂತೆ. ಇವರ ಧನ, ದೌಲತ್ತು, ಪ್ರತಿಷ್ಠೆಗಳು ನನಗೆ ಬೇಕೂ ಇರಲಿಲ್ಲವೆಂದು ಲಗುಬಗೆ ಯಿಂದ ನಿವಾಸಕ್ಕೆ ಬಂದು, ಬಟ್ಟೆ ಬರೆ, ಗಂಟು, ಮೂಟೆ ಕಟ್ಟಿ ಮರು ಪ್ರಯಾಣ ಪ್ರಾರಂಭಿಸಿಯೇ ಬಿಟ್ಟೆ.

ಅಡಿ ಟಿಪ್ಪಣಿಗಳು

1) ಲೇಖದಲ್ಲಿ ಬರುವ ವ್ಯಕ್ತಿ, ಘಟನೆಗಳೆಲ್ಲ ಕಾಲ್ಪನಿಕ.

2) ವೋವಿ (ಬಹುವಚನ ವೋವ್ಯೊ) ಗಳಿಗೆ ಪ್ರಾಸಕೂಡಿಸುವು ದಕ್ಕಾಗಿ, ದಿನಂಪ್ರತಿ ನೋಡುವ, ಅನುಭವಿಸುವ ಘಟನೆಗಳನ್ನು ಆರಿಸಿಕೊಂಡು, ಹೋಲಿಸಿ, ವಿನೋದ, ಹಾಸ್ಯ, ಕೊಂಕು, ಹೊಗಳಿಕೆ, ತೆಗಳಿಕೆಗಳ ಚುಟುಕುಗಳನ್ನು ಜೋಡಿಸುತ್ತಾರೆ. ಹಾಡು ಕಟ್ಟುವವ ರೆಲ್ಲ ಆಶುಕವಿಗಳು ಎಂಬುದು ಮುಖ್ಯ. ರಾಗ ಬದ್ಧವಾಗಿ ಹಾಡು ವಾಗ, ಮೊದಲನೆಯ ಸಾಲನ್ನು ಎರಡು ಸಲ ಉಚ್ಚರಿಸಿ ಎರಡ ನೆಯದನ್ನು ಎಳೆದೆಳೆದು ಹಾಡುವುದು ರೂಢಿ. ಇವುಗಳ ಮಾಧುರ್ಯವನ್ನು ಕೇಳಿಯೇ ಸವಿಯಬೇಕು.

3) ಅಂದಿನ ದಿನಗಳಲ್ಲಿ ಶಾಲೆ, ಕಾಲೇಜುಗಳಲ್ಲಿ ಬಿಗಿ ಬಿಗಿಯಾದ ಮಗ್ಗಿಗಳನ್ನು ಕಲಿಸುತ್ತಿರಬೇಕು ಎಂಬುದು ನನ್ನ ಭಾವನೆಯಾಗಿತ್ತು !

4) ಕರ್ನಾಟಕದ ಮಧ್ಯಯುಗದ ಸಾಮಾಜಿಕ ಜೀವನದ ಕುರಿತು ಡಾಕ್ಟರೇಟಿಗಾಗಿ ಅಧ್ಯಯನ ನಡೆಸಿದಾಗ, ಹನ್ನೆರಡನೇ ಶತಕದಲ್ಲಿ ಚಾಲುಕ್ಯ ಅರಸು, ಮುಮ್ಮಡಿ ಸೋಮೇಶ್ವರ ವಿರಚಿತ ಸಂಸ್ಕೃತ ಗ್ರಂಥ 'ಮಾನಸೋಲ್ಲಾಸ'ದಲ್ಲಿ ಕರಾವಳಿಯ ಹೆಂಗಸರು 'ಓವಿ' ಹಾಡುತ್ತ ಬತ್ತ ಕುಟ್ಟುತ್ತಾರೆ" ಎಂಬ ಉಲ್ಲೇಖ ಓದಿ ಮೋಜೆನಿಸಿತು. ಶತಕಗಳಿಂದ ಹೆಂಗಳೆಯರು ಹಾಡುತ್ತ ಬಂದಿದ್ದ ಸಶಕ್ತವಾಗಿದ್ದ ಒಂದು ಜಾನಪದ ಪ್ರಕಾರ, ನಮ್ಮ ಕಣ್ಣೆದುರಿಗೇ ಕೊನೆಯುಸಿರು ಎಳೆಯುತ್ತಿರುವುದು ಅತ್ಯಂತ ಶೋಚನೀಯ.

ಕೊಂಕಣಿ ಮಾಯ್‌ಭಾಸ ಆಶ್ಶಿಲ್ಲ್ಯಾ ಪ್ರತಿ ಏಕ ಘರಾಂತು ಆಸ್ಕಾ ಜಾಲ್ಲಲೆಂ ಪುಸ್ತಕ

ಕುಂಡ್ಯಾ ಕುರ್ಕುಳ

ಪಂದ್ರಾ ಕೊಂಕಣಿ ಜಾನಪದ (ಆಜ್ಜಿನೆ ಸಾಂಗಿಲ್ಯೊ) ಕಾಣ್ಯೊಂ



ನಿರೂಪಣ – ಸಂಪಾದಕ

ಸಂತೋಷಕುಮಾರ್ ಗುಲ್ವಾಡಿ

ಸಂಗ್ರಹ

ಕಸ್ತೂರಿ ಪಿ. ಮಲ್ಯ

ಪ್ರಕಾಶನ

ಕೊಂಕಣಿ ಭಾಷೋದ್ಧಾರ ಟ್ರಸ್ಟ್, ಮಣಿಪಾಲ

ಸಿಂಡಿಕೇಟ್ ಹೌಸ್

ಮಣಿಪಾಲ

ಪಾನ್ನಂ 80 (ಕನ್ನಡ ಲಿಪಿ)

ಮೋಲ ರೂ. 5/- ಮಾತ್ರ

ಮಣಿಪಾಲ ಕೊಂಕಣಿ ಸಾಹಿತ್ಯ ಸಮ್ಮೇಳನಾಂತು ಉಜ್ವಾಡಾ ಎತ್ತಾ.

ಪಂದ್ರಾ ಕಾಣ್ಯೊ :

ಕುಂಡ್ಯಾ ಕುರ್ಕುಳ, ಆಪ್ಪುಲಿ ಆನಿ ತಿಪ್ಪುಲಿ, ವಾಶೆ ಹಿಂಡ್ಲ್ಯಾ ಚೆಲ್ಲೊ, ಭಾಂಗ್ರಾ ಗೆರಶಿ, ಕಾರಾತೆ ಧೂವಾಲೊ, ಜಾನಕಿ ಬಾಳ, ಪಕ್ಷ್ಯಾ ಪಾತ್ತ್ರೊಳಿ, ಕೇಶವ ಭಟ್ಟ್ವಾಲೊ ತೀಳು, ಭಾಂಗ್ರಾ ಗಿಂಡಿ, ಅವ್ರ್ಯಾ ತೋಂಡಾರಿ ಧವೊಂಗೇರೊ, ಅಶ್ಶಿ ಕೆಲ್ಲೆಂ ತಶ್ಶಿ, ಆಮಾಸ ಆನಿ ಪುನ್ನವ, ಅಪ್ಪೆ ಕಾಣಿ, ಕಿಡಿ ಕಿಡಿ ಖಾವುಂ ಕುಟ್ವ್ಯಾ, ಸ್ಕೊರೊ ಆನಿ ಬಡ್ಡೊ.

YOUR SAVINGS WEIGH MORE

Interest is the reward for your Savings
Hence, it is but natural to consider
Where Savings secure the maximum return
Here are our various Savings Schemes which yield
fabulous return to your Savings

FIXED DEPOSIT
ABHYUDAYA CASH CERTIFICATE
DIAMOND JUBILEE CASH CERTIFICATE
HONEY DEPOSIT
ANANTHA DEPOSIT
CUMULATIVE DEPOSIT
VISHRANTHI DEPOSIT
SAVINGS BANK
CURRENT ACCOUNT
NON-RESIDENT (EXTERNAL) ACCOUNT
FOREIGN CURRENCY NON-RESIDENT ACCOUNT, Etc.

Kindly contact our nearest Branch for details

KARNATAKA BANK LTD.

Regd. and Head Office: MANGALORE – 575 003

With best compliments from:

Industrial
Credit **& Development**
Syndicate **Limited**

H.O.: SYNDICATE HOUSE
MANIPAL – 576 119

Credit Syndicate

A UNIT OF THE MULTI-CRORE
MULTI-PRODUCT
MANIPAL GROUP OF COMPANIES OFFERS
HIRE PURCHASE, LEASING AND
ATTRACTIVE DEPOSIT SCHEMES